ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು

**ವಿಷಯ ಸಂಕೇತ : 183**

ಪ್ರಶ್ನೆ ಪುಸ್ತಿಕೆ ಶ್ರೇಣಿ

**C**

4757875

# ಪ್ರಶ್ನೆ ಪುಸ್ತಿಕೆ

# ಸಾಮಾನ್ಯ ಜ್ಞಾನ

# (ಪತ್ರಿಕೆ I)

**ಸಮಯ : $1\frac{1}{2}$ ಗಂಟೆಗಳು** **ಗರಿಷ್ಠ ಅಂಕಗಳು : 100**

## ಸೂಚನೆಗಳು

1. ಪರೀಕ್ಷೆ ಪ್ರಾರಂಭಗೊಂಡ ತಕ್ಷಣವೇ ಒ.ಎಂ.ಆರ್. ಉತ್ತರಹಾಳೆಯಲ್ಲಿ ಪ್ರಶ್ನೆ ಪುಸ್ತಿಕೆ ಶ್ರೇಣಿಯನ್ನು ಗುರುತು ಮಾಡುವ ಮೊದಲು, ಈ ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆಗಳು ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ನೀವು ಪರೀಕ್ಷಿಸತಕ್ಕದ್ದು. ಮೇಲಿನ ಯಾವುದೇ ದೋಷ ಕಂಡುಬಂದಲ್ಲಿ ಅದನ್ನು ಹಿಂತಿರುಗಿಸಿ ಲಭ್ಯವಿರುವ ಶ್ರೇಣಿಯ ಪರಿಪೂರ್ಣವಾದ ಬೇರೆ ಪ್ರಶ್ನೆ ಪುಸ್ತಿಕೆಯನ್ನು ಪಡೆಯತಕ್ಕದ್ದು.
2. **ಅಭ್ಯರ್ಥಿಯು ಪ್ರಶ್ನೆ ಪುಸ್ತಿಕೆಯ ಶ್ರೇಣಿ A, B, C ಅಥವಾ D ಅನ್ನು ವಿಷಯ ಸಂಕೇತ ಮತ್ತು ನೋಂದಣಿ ಸಂಖ್ಯೆಯನ್ನು OMR ಉತ್ತರ ಪತ್ರಿಕೆಯಲ್ಲಿ ಅದಕ್ಕಾಗಿ ಒದಗಿಸಲಾಗಿರುವ ಸ್ಥಳದಲ್ಲಿ ಬರೆದು ಸಂಕೇತ (ಎನ್ ಕೋಡ್) ಗೊಳಿಸಬೇಕು. ಹಾಗೂ ನಿಗದಿತ ಸ್ಥಳದಲ್ಲಿ ತಾವು ಮತ್ತು ಸಂವೀಕ್ಷಕರು ಸಹಿ ಮಾಡಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ಒ.ಎಂ.ಆರ್. ಹಾಳೆಯಲ್ಲಿ ತಿಳಿಸಿರುವ ಯಾವುದೇ ಮಾಹಿತಿಯನ್ನು ಭರ್ತಿ ಮಾಡುವುದು/ಎನ್ ಕೋಡ್ ಮಾಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಭರ್ತಿ ಮಾಡದಿದ್ದಲ್ಲಿ/ತಪ್ಪಿದಲ್ಲಿ ಅಂತಹ ಒ.ಎಂ.ಆರ್. ಉತ್ತರ ಹಾಳೆಯನ್ನು ತಿರಸ್ಕರಿಸಲಾಗುವುದು.**
3. ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. **ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.**

| **ನೋಂದಣಿ ಸಂಖ್ಯೆ** |
|---|
| 8452158 |

4. ಈ ಪ್ರಶ್ನೆ ಪುಸ್ತಿಕೆ **100** ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು **4** ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಉತ್ತರ ಹಾಳೆಯ ಮೇಲೆ **ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು.** ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿನ ವಿವರವಾದ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.** ಪ್ರತಿ ತಪ್ಪು ಉತ್ತರಕ್ಕೆ ಪ್ರಶ್ನೆಗೆ ನಿಗದಿಪಡಿಸಿದ ಅಂಕಗಳ ¼ (0·25) ರಷ್ಟು ಅಂಕಗಳನ್ನು ಕಳೆಯಲಾಗುವುದು.
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಉತ್ತರ ಪತ್ರಿಕೆ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
9. **ಪ್ರಶ್ನೆಗಳು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿರುತ್ತವೆ. ಕನ್ನಡ ಪ್ರಶ್ನೆಗಳಲ್ಲಿ ಸಂದೇಹ ಉಂಟಾದರೆ, ದಯವಿಟ್ಟು ಆಂಗ್ಲ ಭಾಷೆಯ ಪ್ರಶ್ನೆಗಳನ್ನು ಗಮನಿಸುವುದು. ಪ್ರಶ್ನೆ ಪತ್ರಿಕೆಯ ಪ್ರಶ್ನೆಗಳಲ್ಲಿ ಯಾವುದೇ ಗೊಂದಲಗಳಿದ್ದರೂ ಆಂಗ್ಲಭಾಷೆಯ ಪ್ರಶ್ನೆಗಳೇ ಅಂತಿಮವಾಗಿರುತ್ತದೆ.**

**ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯೂನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**

***Note :*** *English version of the instructions is printed on the back cover of this booklet.*



www.kpscvaani.com

Scanned by CamScanner

1. ಪಟ್ಟಿ I ರಲ್ಲಿರುವ ಜಲಪಾತಗಳನ್ನು ಅವುಗಳಿರುವ ದೇಶಗಳೊಂದಿಗೆ ಪಟ್ಟಿ II ಹೊಂದಿಸಿ :

| ಪಟ್ಟಿ I (ಜಲಪಾತಗಳು) | ಪಟ್ಟಿ II (ದೇಶಗಳು) |
|---|---|
| A. ಯೊಸೆಮೈಟ್ | I. ಜಿಂಬಾಬ್ವೆ |
| B. ವಿಕ್ಟೋರಿಯ | II. ಯು.ಎಸ್.ಎ. |
| C. ಪ್ಲಿಟ್‌ವೈಸ್ | III. ಐಸ್‌ಲ್ಯಾಂಡ್ |
| D. ಡೆಟ್ಟಿಫೊಸ್ | IV. ಕ್ರೊಯೆಸಿಯಾ |
| | V. ಝೈರೆ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | III | I | V | II |
| (2) | II | I | IV | III |
| (3) | IV | III | II | I |
| (4) | II | V | I | III |

2. ಪಟ್ಟಿ I ರಲ್ಲಿರುವ ರಾಷ್ಟ್ರೀಯ ಉದ್ಯಾನಗಳನ್ನು ಪಟ್ಟಿ II ರಲ್ಲಿರುವ ಅವು ನೆಲೆ ಯಾಗಿರುವ ರಾಜ್ಯಗಳೊಂದಿಗೆ ಹೋಲಿಸಿ :

| ಪಟ್ಟಿ I (ರಾಷ್ಟ್ರೀಯ ಉದ್ಯಾನ) | ಪಟ್ಟಿ II (ರಾಜ್ಯಗಳು) |
|---|---|
| A. ಜಿಮ್ ಕಾರ್ಬೆಟ್ | I. ರಾಜಸ್ಥಾನ್ |
| B. ಬಾಂಧವ್‌ಗಢ್ | II. ಅಸ್ಸಾಂ |
| C. ಖಾಝಿರಂಗ | III. ಜಾರ್‌ಖಂಡ್ |
| D. ಕಿಯೋಲೆಡೋ | IV. ಉತ್ತರಾಖಂಡ್ |
| | V. ಮಧ್ಯ ಪ್ರದೇಶ್ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | III | I | IV | II |
| (2) | II | I | IV | III |
| (3) | V | III | II | I |
| (4) | IV | V | II | I |

3. ಈ ಕೆಳಗಿನ ಯಾವ ಕಾರಣದಿಂದಾಗಿ ಇತಿಹಾಸದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಲಾಹೋರ್ ಅಧಿವೇಶನವು ಪ್ರಸಿದ್ಧವಾಗಿದೆ ?

A. ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಯ ನಿರ್ಣಯವನ್ನು ಕಾಂಗ್ರೆಸ್ ಹೊರಡಿಸಿತು.

B. ಉಗ್ರಗಾಮಿಗಳು ಮತ್ತು ಮಂದಗಾಮಿಗಳ ನಡುವಿನ ಬಿರುಕು ಆ ಅಧಿವೇಶನದಲ್ಲಿ ಬಗೆಹರಿಯಿತು.

C. ಈ ಅಧಿವೇಶನದಲ್ಲಿ ಎರಡು ರಾಷ್ಟ್ರಗಳ ಸಿದ್ಧಾಂತವನ್ನು ತಿರಸ್ಕರಿಸಿದ ನಿರ್ಣಯವು ಹೊರಡಿಸಲ್ಪಟ್ಟಿತು.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು /ವು ಸರಿ ?

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) B ಮತ್ತು C ಮಾತ್ರ

(3) A ಮತ್ತು C ಮಾತ್ರ

(4) ಮೇಲಿನ ಯಾವುದೂ ಅಲ್ಲ

4. ಅಸಹಕಾರ ಚಳುವಳಿಯನ್ನು ಆರಂಭಿಸುವ ಮುನ್ನ, ಬಗೆಹರಿಸುವ ಷರತ್ತಾಗಿ ಈ ಕೆಳಗಿನ ಯಾವುದನ್ನು ಗಾಂಧೀಜಿಯವರು, ಸರ್ಕಾರದ ಮುಂದೆ ಬೇಡಿಕೆಯಾಗಿಟ್ಟಿರಲಿಲ್ಲ ?

(1) ಸರ್ಕಾರವು ರೌಲತ್ ಕಾಯ್ದೆಯನ್ನು ಹಿಂತೆಗೆದುಕೊಳ್ಳುವುದು.

(2) ಜಲಿಯನ್‌ವಾಲಾ ಬಾಗ್‌ನ ದುರಂತಕ್ಕಾಗಿ ಸರ್ಕಾರವು ವಿಷಾದ ವ್ಯಕ್ತಪಡಿಸುವುದು

(3) ಬ್ರಿಟಿಷ್ ಸರ್ಕಾರವು ಟರ್ಕಿಯವರೊಂದಿಗೆ ಉದಾರವಾಗಿ ವರ್ತಿಸುವುದು.

(4) 1919 ಕ್ಕಿಂತಲೂ ಉತ್ತಮ ಯೋಜನೆಗಳ ಸುಧಾರಣೆಯನ್ನು ಸರ್ಕಾರವು ಮಾಡುವುದು.



www.kpscvaani.com
Scanned by CamScanner

5. 1935 ರ ಭಾರತ ಸರ್ಕಾರದ ಕಾಯ್ದೆಯ ಮೇಲೆ ಈ ಕೆಳಗಿನ ಯಾವ ಹೇಳಿಕೆಯು/ಗಳು ಸರಿಯಾಗಿದೆ/ವೆ ?

A. ಇದು ಪ್ರಾಂತೀಯ ಸ್ವಾಯತ್ತೆಗೆ ಅವಕಾಶವನ್ನು ನೀಡಿದೆ.

B. ಫೆಡರಲ್ ಕೋರ್ಟ್‌ಗಳ ಸ್ಥಾಪನೆಗೆ ಅವಕಾಶವನ್ನು ನೀಡಿದೆ.

C. ಕೇಂದ್ರದಲ್ಲಿ ಅಖಿಲ ಭಾರತೀಯ ಫೆಡರೇಶನ್‌ಗೆ ಅವಕಾಶವನ್ನಿತ್ತಿದೆ.

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮತ್ತು B ಮಾತ್ರ

(2) B ಮತ್ತು C ಮಾತ್ರ

(3) A ಮತ್ತು C ಮಾತ್ರ

(4) A, B ಮತ್ತು C

6. ಚೈನಾದ ಬೃಹತ್ ಗೋಡೆ ಎನಿಸಿಕೊಂಡಿರುವ ಪುರಾತನ ಚೀನಾದ ಗೋಡೆಯ ನಿರ್ಮಾಣವನ್ನು ಉತ್ತರದಿಂದ ಬರುವ ಧಾಳಿಗಳನ್ನು ತಡೆಯಲೋಸುಗ ಯಾರು ಆರಂಭಿಸಿದ್ದರು ?

(1) ಚೂ ದೊರೆ

(2) ಚೀ ದೊರೆ

(3) ಕಿನ್ ದೊರೆ

(4) ಚೌ ದೊರೆ

7. ಉತ್ಸವಗಳು ಮತ್ತು ಅವುಗಳಿಗೆ ಸಂಬಂಧಿಸಿರುವ ರಾಜ್ಯಗಳ ಜೋಡಿಯನ್ನು ಪರಿಗಣಿಸಿ :

A. ಸಿಯಾಂಗ್ ಉತ್ಸವ : ಜಮ್ಮು ಮತ್ತು ಕಾಶ್ಮೀರ್

B. ಪಕ್ಷಿ ವೀಕ್ಷಣಾ ಉತ್ಸವ : ಹಿಮಾಚಲ್ ಪ್ರದೇಶ್

C. ತೋಟದ ಉತ್ಸವ : ಚಂಢೀಗಡ್

D. ಬೊನಾಲು ಜಾತ್ರೆ : ಆಂಧ್ರ ಪ್ರದೇಶ್

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು /ವು ಸರಿ ?

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A, B ಮತ್ತು C ಮಾತ್ರ

(2) A ಮತ್ತು C ಮಾತ್ರ

(3) B ಮತ್ತು C ಮಾತ್ರ

(4) ಮೇಲಿನ ಎಲ್ಲವೂ

8. ಭಾರತೀಯ ರಾಜ್ಯ ಸರ್ಕಾರವೊಂದು ಇತ್ತೀಚೆಗೆ "T-wallet" ಎಂಬ ಡಿಜಿಟಲ್ ವ್ಯಾಲೆಟ್‌ನ್ನು, ಯಾವುದೇ ವ್ಯವಹಾರ ಶುಲ್ಕವನ್ನು ವಿಧಿಸದ, ಮೊಬೈಲ್ ಉಳ್ಳ ಮತ್ತು ಮೊಬೈಲ್ ಫೋನ್ ರಹಿತ ಗ್ರಾಹಕರಿಗೆ ಅಧಿಕೃತವಾಗಿ ಪ್ರಾರಂಭಿಸಿತು. ಇದು ಭಾರತದಲ್ಲಿನ ಯಾವುದೇ ರಾಜ್ಯ ಸರ್ಕಾರದ ಪ್ರಥಮ ಅಧಿಕೃತ ವ್ಯಾಲೆಟ್ ಆಗಿದೆ ಮತ್ತು ಜಾಲ ಆವೃತ್ತಿಯನ್ನು ಸಹಾಉಪಯೋಗಿಸಬಹುದಾಗಿದೆ ಮತ್ತು ಡೆಬಿಟ್, ಕ್ರೆಡಿಟ್ ಕಾರ್ಡ್‌ಗಳು ಅಥವಾ ನೆಟ್ ಬ್ಯಾಂಕಿಂಗ್ ಬಳಕೆಯಲ್ಲಿ ಉಚ್ಚಸ್ಥಾನದಲ್ಲಿದೆ. ಇದು ಯಾವ ರಾಜ್ಯದಲ್ಲಿ ?

(1) ತಮಿಳು ನಾಡು

(2) ತೆಲಂಗಾಣ

(3) ತ್ರಿಪುರ

(4) ಆಂಧ್ರ ಪ್ರದೇಶ್



www.kpscvaani.com

Scanned by CamScanner

9. ಪಟ್ಟಿ I ರಲ್ಲಿನ ಸಸ್ಯವರ್ಗವನ್ನು ಅದು ದೊರೆಯುವ ಖಂಡಗಳೊಡನೆ ಪಟ್ಟಿ II ಹೋಲಿಸಿ :

| ಪಟ್ಟಿ I (ಸಸ್ಯವರ್ಗ) | ಪಟ್ಟಿ II (ಭೂಖಂಡಗಳು) |
|---|---|
| A. ಸ್ಟೆಪ್ಪೀ | I. ಆಸ್ಟ್ರೇಲಿಯಾ |
| B. ಪ್ರೈರೀ | II. ಉತ್ತರ ಅಮೆರಿಕಾ |
| C. ಪಂಪಾಸ್ | III. ದಕ್ಷಿಣ ಅಮೆರಿಕಾ |
| D. ವೆಲ್ಡ್ಸ್ | IV. ಏಷ್ಯಾ |
| E. ಡೌನ್ಸ್ | V. ಆಫ್ರಿಕಾ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D | E |
|---|---|---|---|---|---|
| (1) | IV | II | III | V | I |
| (2) | III | I | II | IV | V |
| (3) | I | II | III | IV | V |
| (4) | III | I | II | V | IV |

10. ವಿವಿಧ ಘಟನೆಗಳ ಪ್ರಖ್ಯಾತ ಸ್ಥಳಗಳು (ಪಟ್ಟಿ I) ಮತ್ತು ಅವುಗಳು ನೆಲೆಯಾಗಿರುವ ದೇಶಗಳೊಂದಿಗೆ (ಪಟ್ಟಿ II) ಹೋಲಿಸಿ :

| ಪಟ್ಟಿ I (ಪ್ರಖ್ಯಾತ ಸ್ಥಳ) | ಪಟ್ಟಿ II (ದೇಶಗಳು) |
|---|---|
| A. ಕ್ಯಾನಿಸ್ | I. ಸ್ವಿಟ್ಜರ್ಲ್ಯಾಂಡ್ |
| B. ಡಾವೂಸ್ | II. ಫ್ರಾನ್ಸ್ |
| C. ದುಬೈ | III. ಬ್ರೆಜಿಲ್ |
| D. ರಯೋಡಿ ಜನ್ಯೆರೋ | IV. ಯುನೈಟೆಡ್ ಅರಬ್ ಎಮಿರೇಟ್ಸ್ |
| E ಮ್ಯೂನಿಚ್ | V. ಜರ್ಮನಿ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D | E |
|---|---|---|---|---|---|
| (1) | III | I | IV | V | II |
| (2) | II | I | IV | III | V |
| (3) | II | I | IV | V | III |
| (4) | II | V | III | IV | I |

11. ವ್ಯಾಪಕವಾಗಿ ಹರಡಿರುವ ತಂಬಾಕು ದುರುಪಯೋಗ ಮತ್ತು ಅದರಿಂದಾಗುವ ಆರೋಗ್ಯದ ಮೇಲಿನ ದುಷ್ಪರಿಣಾಮಗಳನ್ನು ಕುರಿತಾಗಿ ಮತ್ತು ತಂಬಾಕು ಕೈಗಾರಿಕೆಯ ಊರ್ಜಿತವಾಗಬಲ್ಲ ಅಭಿವೃದ್ಧಿಗಾಗಿ ಇರುವ ಮಾರಕಗಳ ನಿರೂಪಣೆ ಕುರಿತಂತೆ ಗಮನಿಸಲು ಪ್ರತಿ ವರ್ಷವೂ ಆಚರಿಸಲಾಗುವಂತೆ ಈ ವರ್ಷವೂ ಆಚರಿಸಲಾದ. "ವಿಶ್ವ ತಂಬಾಕು ವಿರೋಧಿ ದಿನ" ದ ತಿರುಳೇನು ?

(1) ತಂಬಾಕು – ಯಾವುದೇ ರೂಪದಲ್ಲಿ ಅಥವಾ ಛದ್ಮವೇಷದಲ್ಲಿ ಮಾರಣಾಂತಿಕ
(2) ತಂಬಾಕು – ಬೆಳವಣಿಗೆಗೆ ಒಂದು ಮಾರಕ
(3) ತಂಬಾಕು ಕೊಲ್ಲುತ್ತದೆ, ಇದು ನಿಜ
(4) ನಾವು ತಂಬಾಕು ರಹಿತ ವಿಶ್ವದಲ್ಲಿ ವಾಸಿಸೋಣ



www.kpscvaani.com
Scanned by CamScanner

12. ಮುಂಬರುವ 72 ನೇ ಅಧಿವೇಶನಕ್ಕಾಗಿ, ನ್ಯೂಯಾರ್ಕ್‌ನಲ್ಲಿನ ವಿಶ್ವಸಂಸ್ಥಾ ಕೇಂದ್ರಸ್ಥಾನದಲ್ಲಿ ವಿಶ್ವ ಸಂಸ್ಥೆ ಸಾಮಾನ್ಯ ಸಭೆಯ ನೂತನ ಅಧ್ಯಕ್ಷರಾಗಿ ಮಿರೋಸ್ಲಾವ್ ಲಜ್ಚಕ್ ರು ಆಯ್ಕೆಯಾಗಿದ್ದಾರೆ. ಇವರು ಯಾವ ದೇಶಕ್ಕೆ ಸೇರಿದವರು ?

(1) ಫಿಜಿ

(2) ಉರುಗ್ವೆ

(3) ಸ್ಲೊವಾಕಿಯಾ

(4) ಸ್ಲೊವೇನಿಯಾ

13. ಹೈದರಾಬಾದ್‌ನಲ್ಲಿ ಇತ್ತೀಚೆಗಷ್ಟೇ ಅಗಲಿದ ಪ್ರಖ್ಯಾತ ವ್ಯಕ್ತಿಯಾದ ದಾಸರಿ ನಾರಾಯಣ್‌ರವರು ಈ ಕೆಳಗಿನ ಯಾವ ಕ್ಷೇತ್ರದಲ್ಲಿ ಪ್ರಸಿದ್ಧಿ ಹೊಂದಿದ್ದರು ?

(1) ಪತ್ರಿಕೋದ್ಯಮ

(2) ಚಲನಚಿತ್ರ ಉದ್ಯಮ

(3) ರಾಜಕೀಯ

(4) ಮೇಲಿನ ಎಲ್ಲವೂ

14. ಅಗ್ಗವಾದ ಮತ್ತು ಶೀಘ್ರವಾದ ಮತ್ತು ಮಾಲಿನ್ಯ ಮುಕ್ತವಾದ ಜೈವಿಕ ಇಂಧನದ ತಯಾರಿಕೆಯ ಮಣ್ಣಿನಿಂದ ಮಣ್ಣಿಗೆ ತಂತ್ರಜ್ಞಾನವು ಇತ್ತೀಚಿನ ದಿನಗಳಲ್ಲಿ ಸುದ್ದಿಯಲ್ಲಿದೆ. ಒಂದು ಸಂಪೂರ್ಣ ಹಸಿರು ಪ್ರಗತಿಯ ಬಳಕೆಯ, ಜೈವಿಕ ಇಂಧನದ ಶೀಘ್ರ ಉತ್ಪಾದನೆ ಕುರಿತು ಖಾತ್ರಿ ಪಡಿಸುವ ಈ ತಂತ್ರಜ್ಞಾನವನ್ನು ಯಾವ ಭಾರತೀಯ ತಂತ್ರಜ್ಞಾನ ಸಂಸ್ಥೆಯು (IIT) ಯು ಅಭಿವೃದ್ಧಿಪಡಿಸಿದೆ ?

(1) ಐ.ಐ.ಟಿ. ಕಾನ್‌ಪುರ್

(2) ಐ.ಐ.ಟಿ. ಮುಂಬಯಿ

(3) ಐ.ಐ.ಟಿ. ದೆಹಲಿ

(4) ಐ.ಐ.ಟಿ. ಕರಗ್‌ಪುರ್

15. ಒಂದು ರಾಜ್ಯ ಸರ್ಕಾರವು ಇತ್ತೀಚೆಗೆ ಒಂದು ಪೋರ್ಟಲ್‌ನ್ನು ಆರಂಭಿಸಿದ್ದು, ಇದು ಉದ್ಯೋಗಾಕಾಂಕ್ಷಿಗಳು ಮತ್ತು ಉದ್ಯೋಗಿಗಳು ತಾವೇ ತಮ್ಮ ಹೆಸರನ್ನು ನೋಂದಣಿ ಮಾಡಲು ಸಾಧ್ಯವಾದ, ಕೆಲಸವನ್ನು ಹುಡುಕುವ ಮತ್ತು ಕೆಲಸಕ್ಕಾಗಿ ಅರ್ಜಿ ಸಲ್ಲಿಸುವ, ತರಬೇತಿಯ ವಿಚಾರಣೆ ಕುರಿತಾದ ಮತ್ತು ಕೆಲಸಕಾರ್ಯಗಳು ಮತ್ತು ತರಬೇತಿಯ ಕುರಿತಾದ ಮಾಹಿತಿಯನ್ನು ಪಡೆಯುವಂತಹುದಾಗಿದೆ. ಆ ಪೋರ್ಟಲ್‌ನ ಹೆಸರೇನು ?

(1) ಮಹಾಯೋಜನ್

(2) ಮಹಾಸ್ವಯಂ

(3) ಮಹಾಮಂಡನ್

(4) ಮಹಾನಿಯುಕ್ತಿ

16. 'ಟೆಲಿಕಾಂ ಉದ್ಯಮ ಕಾಯ ಸೆಲ್ಯುಲರ್ ಆಪರೇಟರ್ಸ್' ಅಸೋಸಿಯೇಷನ್ ಆಫ್ ಇಂಡಿಯಾವು ದೂರ ಸಂಪರ್ಕಗಳು ಮತ್ತು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಹಾಗೂ ಕೌಶಲ್ಯ ಅಭಿವೃದ್ಧಿ ಇಲಾಖೆಯ ಬೆಂಬಲದೊಂದಿಗೆ 2017 ರಲ್ಲಿ ಈ ಕೆಳಗಿನ ಯಾವ ರಾಜ್ಯದಲ್ಲಿ ಭಾರತೀಯ ಮೊಬೈಲ್ ಕಾಂಗ್ರೆಸ್‌ನ್ನು (IMC) ಏರ್ಪಡಿಸುವುದು ?

(1) ಬೆಂಗಳೂರು

(2) ಹೈದರಾಬಾದ್

(3) ಪುಣೆ

(4) ನವ ದೆಹಲಿ

17. 2017 ರ ಕೇನೆಸ್ ಚಲನ ಚಿತ್ರೋತ್ಸವದ 70 ನೇ ಆವೃತ್ತಿಯಲ್ಲಿ ರೂಬನ್ ಓಸ್ಟ್ಲೂಂಡ್ ರಿಂದ ನಿರ್ದೇಶಿತವಾದ ಸ್ವೀಡಿಶ್ ಚಲನಚಿತ್ರವು ಪಾಲ್ಮ್ ಡಿ ಓ. ಆರ್ ನ್ನು ಗೆದ್ದಿದೆ ?

(1) ಏಪ್ರಿಲ್ಸ್ ಡಾಟರ್

(2) ಮಿಸ್ಟಿಕ್ ರಿವರ್

(3) ದಿ ಸ್ಕ್ವೇರ್

(4) ರೌಂಡ್ ದಿ ವರ್ಲ್ಡ್



www.kpscvaani.com

Scanned by CamScanner

18. ಪ್ರತಿವರ್ಷದ ಮೇ 29 ರಂದು ಹುತಾತ್ಮರಾದ ಶಾಂತಿಕಾರರ ಸ್ಮರಣೆಯಲ್ಲಿ ಅಂತರ ರಾಷ್ಟ್ರೀಯ ವಿಶ್ವ ಸಂಸ್ಥಾ ಶಾಂತಿಕಾರರ ದಿನವನ್ನು, ವಿಶ್ವಸಂಸ್ಥೆಯ ಶಾಂತಿಕಾಪಾಡುವಿಕೆಯ ಕಾರ್ಯಾಚರಣೆಗಳಲ್ಲಿ ತಮ್ಮ ಉನ್ನತ ಮಟ್ಟದ ವೃತ್ತಿಗರಿಮೆ, ತ್ಯಾಗ ಮತ್ತು ಶೌರ್ಯಗಳನ್ನು ಮೆರೆದಿರುವ, ಸೇವೆಯಲ್ಲಿ ಸಲ್ಲಿಸರುವ ಮತ್ತು ಇನ್ನು ಸೇವೆಯನ್ನು ಸಲ್ಲಿಸುತ್ತಿರುವವರ ಗೌರವಾರ್ಥಕ್ಕಾಗಿ ಆಚರಿಸಲಾಗುತ್ತದೆ, ವಿಸ್ವಸಂಸ್ಥೆಯ ಶಾಂತಿಕಾರರ 2017 ರ ಅಂತರರಾಷ್ಟ್ರೀಯ ದಿನದ ಆಚರಣೆಯ ತಿರುಳೇನು ?

(1) ಶಾಂತಿ : ಭವಿಷ್ಯತ್ತಿಗೆ ಒಂದೇ ಪರಿಹಾರ

(2) ಸುಸ್ಥಿರ ಅಭಿವೃದ್ಧಿಯನ್ನು ಶಾಂತಿಯು ತರುತ್ತದೆ

(3) ನಾವು ಒಟ್ಟಾಗಿ ಶಾಂತಿಗಾಗಿ ಕೆಲಸ ಮಾಡೋಣ

(4) ಪ್ರಪಂಚದಾದ್ಯಂತ ಶಾಂತಿಯನ್ನು ಹೂಡೋಣ

19. ರಾಷ್ಟ್ರಾದ್ಯಂತ ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯಗಳ ಬಳಕೆಯ ವೃದ್ಧಿಗಾಗಿ 2017 ರ ಮೇ 30 ರಂದು ಮುಂಬಯಿಯಲ್ಲಿ ಕೇಂದ್ರ ಸರ್ಕಾರವು ಒಂದು ಹೊಸ ರಾಷ್ಟ್ರವ್ಯಾಪಿ ವಿಶ್ವ ಬ್ಯಾಂಕ್ ಬೆಂಬಲಿತ ಚಳುವಳಿಯಾದ "ದರ್ವಾಜಾ ಬಂದ್" ನ್ನು ಆರಂಭಿಸಿತು, ಈ ಕೆಳಗಿನ ಯಾವ ಪ್ರತಿಮಾ ತಾರೆಯ ನೇತೃತ್ವದಲ್ಲಿ, ಈ ಕಾರ್ಯಕ್ರಮವು ಜರುಗಿತು ?

(1) ಮೇರಿ ಕೋಂ

(2) ಗೀತಾ ಫೋಗಟ್

(3) ಪ್ರಭಾಸ್

(4) ಅಮಿತಾಬ್ ಬಚ್ಚನ್

20. ಗ್ರೆಗ್ ಅಲ್‌ಮನ್ ಖ್ಯಾತ ಸಂಗೀತಗಾರ ಗಾಯಕ ಕೀಬೋರ್ಡಿಸ್ಟ್ ಮತ್ತು ಗೀತರಚನಾಕಾರರು ದಕ್ಷಿಣದ ರಾಕ್‌ನ ಪ್ರವರ್ತಕರಾಗಿದ್ದರು ಮತ್ತು ಆಲ್ಮನ್ ಬ್ರದರ್ಸ ಬ್ಯಾಂಡ್‌ನ ಸಹಸ್ಥಾಪಕರೂ ಆಗಿದ್ದು ಇತ್ತೀಚೆಗೆ ನಿಧನವಾದರು ಅವರು ಯಾವ ದೇಶದಿಂದ ಬಂದವರು ?

(1) ಅಮೆರಿಕ ರಾಜ್ಯಗಳ ಒಕ್ಕೂಟ

(2) ಬ್ರೆಜಿಲ್

(3) ನಾರ್ವೆ

(4) ಫ್ರಾನ್ಸ್

21. ಈ ಕೆಳಗಿನ ಕಣಿವೆಗಳು ಮತ್ತು ಅವುಗಳು ನೆಲೆಗೊಂಡಿರುವ ಸ್ಥಳಗಳ ಜೋಡಿಗಳನ್ನು ಪರಿಗಣಿಸಿ :

| ಕಣಿವೆಗಳು | | ನೆಲೆಯಾಗಿರುವ ಸ್ಥಳಗಳು |
|---|---|---|
| A. ಜೊಜಿಲಾ ಮತ್ತು ಬುರ್ಜಿಲಾ | : | ಜಮ್ಮು ಮತ್ತು ಕಾಶ್ಮೀರ |
| B. ಬರಾ ಲಾಪ್‌ಚಾ ಲಾ ಮತ್ತು ಶಿಪ್‌ಕಿ ಲಾ | : | ಉತ್ತರ ಪ್ರದೇಶ್ |
| C. ಥಾಗಾ ಲಾ, ನೀತಿ ಕಣಿವೆ ಮತ್ತು ಲಿಪು ಲೇಕ್ | : | ಹಿಮಾಚಲ್ ಪ್ರದೇಶ್ |
| D. ನಾಥು ಲಾ ಮತ್ತು ಜೆಲೆಪ್ ಲಾ | : | ಸಿಕ್ಕಿಂ |

ಇವುಗಳಲ್ಲಿ ಯಾವುವು ತಪ್ಪಾಗಿ ಹೊಂದಿಸಲ್ಪಟ್ಟಿವೆ ? ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮತ್ತು B ಮಾತ್ರ

(2) B ಮತ್ತು C ಮಾತ್ರ

(3) C ಮತ್ತು D ಮಾತ್ರ

(4) A, B ಮತ್ತು C ಮಾತ್ರ

22. ಈ ಕೆಳಗಿನ ಭಾರತೀಯ ರಾಜ್ಯಗಳನ್ನು ಪರಿಗಣಿಸಿ :

A. ತೆಲಂಗಾಣ

B. ತಮಿಳು ನಾಡು

C. ಪಶ್ಚಿಮ ಬೆಂಗಾಲ್

D. ಅರುಣಾಚಲ ಪ್ರದೇಶ್

E. ಝಾರ್‌ಖಂಡ್

ಈ ಎರಡರಲ್ಲಿ ಕ್ರಮವಾಗಿ ಅತಿ ದೊಡ್ಡ ಮತ್ತು ಅತಿ ಚಿಕ್ಕ ಭೌಗೋಳಿಕ ಪ್ರದೇಶವನ್ನು ಹೊಂದಿರುವುವು ಯಾವುವು ?

(1) A ಮತ್ತು D ಮಾತ್ರ

(2) B ಮತ್ತು E ಮಾತ್ರ

(3) B ಮತ್ತು C ಮಾತ್ರ

(4) D ಮತ್ತು A ಮಾತ್ರ



www.kpscvaani.com

Scanned by CamScanner

**23.** ಒಬ್ಬ ಶ್ರೇಷ್ಠ ಕ್ರಾಂತಿಕಾರಿಯು ತನ್ನ ಜೀವನದ ಆದರ್ಶವನ್ನು ಈ ಕೆಳಗಿನ ಮಾತುಗಳಲ್ಲಿ ಸಾರಾಂಶೀಕರಿಸಿದ್ದಾನೆ :

"ಭಾರತದಲ್ಲಿ ಪ್ರಸ್ತುತ ಕಲಿಯಬೇಕಾಗಿರುವ ಒಂದೇ ಆವಶ್ಯಕ ಪಾಠ ಎಂದರೆ ಹೇಗೆ ಸಾಯುವುದೆಂಬುದು ಮತ್ತು ಬೋಧನೆಯ ಒಂದೇ ಮಾರ್ಗವೆಂದರೆ ನಮಗೆ ನಾವೇ ಮಾಡುವುದು. ಆದ್ದರಿಂದ ನಾನು ಸಾಯುವೆ ಮತ್ತು ಇದು ನನ್ನ ಹುತಾತ್ಮತೆಯಲ್ಲಿನ ಘನತೆ."

ಹೀಗೆಂದವರು ಯಾರು ?

(1) ಭಗತ್ ಸಿಂಗ್

(2) ರಾಮ್ ಪ್ರಸಾದ್ ಬಿಸ್ಮಿಲ್

(3) ಮದನ್ ಲಾಲ್ ಢಿಂಗ್ರಾ

(4) ಸೂರ್ಯ ಸೇನ್

**24.** ಭಾರತೀಯ ರಾಷ್ಟ್ರೀಯತೆಯ ಚಳುವಳಿಗೆ ಸಂಬಂಧಿಸಿದಂತೆ ಪಟ್ಟಿ I ರಲ್ಲಿನ ಘಟನೆಗಳು ಮತ್ತು ಪಟ್ಟಿ II ರಲ್ಲಿ ಅದಕ್ಕೆ ಸಂಬಂಧಿಸಿರುವ ವ್ಯಕ್ತಿಗಳೊಂದಿಗೆ ಸರಿ ಹೊಂದಿಸಿ :

| *ಪಟ್ಟಿ I* *(ಘಟನೆ)* | | *ಪಟ್ಟಿ II* *(ಸಂಬಂಧಿಸಿರುವ ವ್ಯಕ್ತಿ)* | |
|---|---|---|---|
| A. | ಚಿತ್ತಗಾಂಗ್ ಸಶಸ್ತ್ರ ಧಾಳಿ | I. | ಲಾಲಾ ಹರ್‌ದಯಾಳ್ |
| B. | ಕಾಕೊರಿ ಪಿತೂರಿ | II. | ಜತಿನ್ ದಾಸ್ |
| C. | ಲಾಹೋರ್ ಪಿತೂರಿ | III. | ಸೂರ್ಯ ಸೇನ್ |
| D. | ಘದರ್ ಪಕ್ಷ | IV. | ರಾಂ ಪ್ರಸಾದ್ ಬಿಸ್ಮಿಲ್ |
| | | V. | ವಾಸುದೇವ್ ಫಾಡ್ಕೆ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | III | IV | I | V |
| (2) | IV | III | II | V |
| (3) | III | IV | II | I |
| (4) | II | IV | III | I |

**25.** ಒಂದು ವಸ್ತುವನ್ನು ಒಂದು ನಿಮ್ನ ಕನ್ನಡಿಯ ಕೇಂದ್ರದಲ್ಲಿ ಇರಿಸಲಾಗುತ್ತದೆ ಪ್ರತಿಬಿಂಬವು.

(1) ನಿಜವಾದ, ತಲೆಕೆಳಗಾದ, ಕೇಂದ್ರದಲ್ಲಿರುವಷ್ಟೇ ಗಾತ್ರ

(2) ನಿಜವಾದ, ನೇರವಾಗಿ, ಕೇಂದ್ರದಲ್ಲಿರುವಷ್ಟೇ ಗಾತ್ರ

(3) ವರ್ಚುವಲ್, ತಲೆಕೆಳಗಾದ, ಅಪರಿಮಿತವಾಗಿ ಹೆಚ್ಚು ವಿಸ್ತರಿಸಿದ

(4) ನೈಜ, ತಲೆಕೆಳಗಾದ, ಅಪರಿಮಿತವಾಗಿ ವಿಸ್ತರಿಸಿದ

**26.** ದಂಡಕಾಂತದ ಬಗ್ಗೆ ಈ ಕೆಳಗಿನ ಯಾವ ಹೇಳಿಕೆಯು ಸರಿಯಾಗಿದೆ ?

(1) ದಂಡಕಾಂತದ ಉತ್ತರ ಧ್ರುವದ ಧ್ರುವ ಸಾಮರ್ಥ್ಯವು ದಕ್ಷಿಣ ಧ್ರುವ ಸಾಮರ್ಥ್ಯಕ್ಕಿಂತ ಹೆಚ್ಚಾಗಿದೆ.

(2) ದಂಡ ಕಾಂತದ ತುಂಡನ್ನು ಅದರ ಅಕ್ಷಕ್ಕೆ ಲಂಬಾಂತರವಾಗಿರುವಂತೆ ವಿಭಜಿಸಿದಾಗ, ಉತ್ತರ ಧ್ರುವ ಮತ್ತು ದಕ್ಷಿಣ ಧ್ರುವಗಳು ಪ್ರತ್ಯೇಕಗೊಳ್ಳುತ್ತವೆ.

(3) ದಂಡಕಾಂತದ ತುಂಡನ್ನು ಅದರ ಅಕ್ಷಕ್ಕೆ ಲಂಬಾಂತರವಾಗಿರುವಂತೆ ವಿಭಜಿಸಿದಾಗ, ಎರಡು ಹೊಸ ದಂಡಕಾಂತಗಳು ರೂಪುಗೊಳ್ಳುತ್ತವೆ.

(4) ದಂಡಕಾಂತದ ಧ್ರುವಗಳು ಉಜ್ವಲತೆಯಲ್ಲಿ (magnitude) ಅಸಮ ಮತ್ತು ಸ್ವಭಾವದಲ್ಲಿ ವಿರುದ್ಧವಾಗಿರುತ್ತವೆ.



www.kpscvaani.com

Scanned by CamScanner

27. ಕೆಳಗಿನ ಬದಲಾವಣೆಗಳನ್ನು ಪರಿಗಣಿಸಿ :

A. ಕೆಂಪು ಮತ್ತು ಹಸಿರು ಬಣ್ಣದ ಗೋಲಿಗಳನ್ನು ಮಿಶ್ರ ಮಾಡುವುದು

B. ಒಂದು ದ್ರವದ ಘನೀಕರಣ

C. ನೀರಿನಲ್ಲಿ ಸಕ್ಕರೆಯ ವಿಲೀನ

D. ಕ್ಯಾರಾಮೆಲ್ ಆಗಲು ಸಕ್ಕರೆಯನ್ನು ಬಿಸಿ ಮಾಡುವುದು (ಸಕ್ಕರೆಗಂದು)

E. ಕಬ್ಬಿಣದ ತುಕ್ಕು ಹಿಡಿಯುವಿಕೆ

F. ಆಮ್ಲ ಮತ್ತು ಪ್ರತ್ಯಾಮ್ಲಗಳನ್ನು ಮಿಶ್ರ ಮಾಡುವುದು

ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು / ವು ಸರಿ ?

(1) A, B ಮತ್ತು C ಗಳು ಭೌತ ಬದಲಾವಣೆಗಳಾದರೆ, D, E ಮತ್ತು F ಗಳು ರಾಸಾಯನಿಕ ಬದಲಾವಣೆಗಳು.

(2) A, B ಮತ್ತು D ಗಳು ಭೌತ ಬದಲಾವಣೆಗಳಾದರೆ, C, E ಮತ್ತು F ಗಳು ರಾಸಾಯನಿಕ ಬದಲಾವಣೆಗಳು.

(3) A, B, D ಮತ್ತು E ಗಳು ಭೌತ ಬದಲಾವಣೆಗಳಾದರೆ, D ಮತ್ತು F ಗಳು ರಾಸಾಯನಿಕ ಬದಲಾವಣೆಗಳು.

(4) A ಮತ್ತು B ಗಳು ಭೌತ ಬದಲಾವಣೆಗಳಾದರೆ, C, D, E ಮತ್ತು F ಗಳು ರಾಸಾಯನಿಕ ಬದಲಾವಣೆಗಳು.

28. ಕಂಚನ್ನು ವಿಗ್ರಹಗಳು ಮತ್ತು ಪದಕಗಳನ್ನು ತಯಾರಿಸಲು ಬಳಸಿದರೆ, ಹಿತ್ತಾಳೆಯನ್ನು ಪಾತ್ರೆಗಳು, ವೈಜ್ಞಾನಿಕ ಉಪಕರಣಗಳು ಮತ್ತು ತೋಟಾಗಳನ್ನು ತಯಾರಿಸಲು ಬಳಸುತ್ತಾರೆ. ಹಿತ್ತಾಳೆ ಮತ್ತು ಕಂಚು ಎರಡೂ ಸಹ ತಾಮ್ರದಿಂದ ಕೂಡಿದ ಮಿಶ್ರಲೋಹಗಳಾದರೂ, ಇವುಗಳ ಸಂಯೋಜನೆಯು, ಈ ಕೆಳಗಿನವುಗಳಲ್ಲಿ ಯಾವುದನ್ನು ಹೆಚ್ಚುವರಿಯಾಗಿ ಸೇರಿಸುವುದ ರಿಂದ ಭಿನ್ನವಾಗಿದೆ ?

(1) ಹಿತ್ತಾಳೆಯಲ್ಲಿನ ಸತು ಮತ್ತು ಕಂಚಿನಲ್ಲಿನ ತವರ

(2) ಹಿತ್ತಾಳೆಯಲ್ಲಿನ ಕ್ರೋಮಿಯಂ ಮತ್ತು ಕಂಚಿನಲ್ಲಿನ ನಿಕ್ಕಲ್

(3) ಹಿತ್ತಾಳೆಯಲ್ಲಿನ ನಿಕ್ಕಲ್ ಮತ್ತು ಕಂಚಿನಲ್ಲಿನ ತವರ

(4) ಹಿತ್ತಾಳೆಯಲ್ಲಿನ ಕಬ್ಬಿಣ ಮತ್ತು ಕಂಚಿನಲ್ಲಿನ ನಿಕ್ಕಲ್

29. "ಕ್ಯಾಪ್ಸ್ ಲಾಕ" ಎಂಬುದನ್ನು ಕಂಪ್ಯೂಟರ್‌ನಲ್ಲಿ ಕಣ್ಣಿಯ ಬೆಣೆ ಕೀಲಿ (ಟಾಗಲ್ ಕೀ) ಎಂಬುದಾಗಿ ಉಲ್ಲೇಖಿಸಲಾಗುವುದು ?

(1) ಏಕೆಂದರೆ ಸಂಖ್ಯೆಗಳನ್ನು ನಮೂದಿಕೆಗೆ ಇದನ್ನು ಬಳಸಲಾಗುವುದಿಲ್ಲ

(2) ಏಕೆಂದರೆ ಡಿಲೀಟ್ ಮಾಡಲು ಇದನ್ನು ಬಳಸಲಾಗುವುದಿಲ್ಲ

(3) ಏಕೆಂದರೆ ಇನ್‌ಸರ್ಟ್ ಮಾಡಲು ಇದನ್ನು ಬಳಸಲಾಗುವುದಿಲ್ಲ

(4) ಏಕೆಂದರೆ ಅದನ್ನು ಪ್ರತಿಸಾರಿ ಒತ್ತಿದಾಗಲೆಲ್ಲಾ ಅದರ ಕಾರ್ಯವು ಮುಂದಕ್ಕೆ ಮತ್ತು ಹಿಂದಕ್ಕೆ ಚಲನೆಯಾಗುವುದು



www.kpscvaani.com

Scanned by CamScanner

**30.** ಈ ಕೆಳಗಿನವುಗಳಲ್ಲಿ ಯಾವುದು ಕಂಪ್ಯೂಟರ್ ಫೈರ್‌ವಾಲ್‌ನ ಗುಣಲಕ್ಷಣವಾಗಿದೆ ?

(1) ಇದು ಒಂದು ತಂತ್ರಾಂಶ ಅಥವಾ ಯಂತ್ರಾಂಶ ಆಧಾರಿತವಾದ ಕಾರ್ಯಕ್ರಮವಾಗಿದ್ದು, ವಿಶೇಷ ಕಾರ್ಯಕ್ರಮಗಳ ನಡೆಸುವಿಕೆಯ ಸಹಾಯದಿಂದ ವೈಯಕ್ತಿಕ (ಪರ್ಸನಲ್) ಕಂಪ್ಯೂಟರ್‌ನ ವೇಗ ಹೆಚ್ಚಾಗುವಂತೆ ಮಾಡುವುದು.

(2) ಇದು ಒಂದು ತಂತ್ರಾಂಶ ಅಥವಾ ಯಂತ್ರಾಂಶ ಆಧಾರಿತವಾದ ಕಾರ್ಯಕ್ರಮವಾಗಿದ್ದು, ಹಾರ್ಡ್ ಡಿಸ್ಕ್ ಮೆಮೊರಿಯ ಅಧಿಕ ಬಳಕೆ ಅಥವಾ ಬಗ್ಸ್‌ನಿಂದುಂಟಾದ ಹೊಡೆತದಿಂದ ವೈಯಕ್ತಿಕ ಕಂಪ್ಯೂಟರ್‌ನ್ನು ರಕ್ಷಿಸುವುದು.

(3) ಇದು ಒಂದು ಸುರಕ್ಷತಾ ವ್ಯವಸ್ಥೆಯಾಗಿದ್ದು ಇದು ಯಂತ್ರಾಂಶ ಮತ್ತು ತಂತ್ರಾಂಶಗಳ ಸಂಯೋಜನೆಯನ್ನು ಹೊಂದಿದ್ದು, ಸ್ಫೋಟಕಗಳ ಹೊಡೆತಕ್ಕೊಳ ಗಾಗದಿರಲು ಕಂಪ್ಯೂಟರ್ ಒಡ್ಡುವಿಕೆಯನ್ನು ಮಿತಿಗೊಳಿಸುತ್ತದೆ ಮತ್ತು ಅಂತರ್ಜಾಲಕ್ಕೆ ಸಂಪರ್ಕಿಸಿರುವ ಸ್ಥಳೀಯ ಕ್ಷೇತ್ರದ ಜಾಲಕಾರ್ಯಗಳಿಗೆ ಸಾಮಾನ್ಯವಾಗಿ ಬಳಸಲಾಗುತ್ತದೆ.

(4) ಈ ಮೇಲೆ ನೀಡಿರುವ ಎಲ್ಲಾ ಗುಣಧರ್ಮಗಳೂ ಕಂಪ್ಯೂಟರ್‌ನ ಫೈರ್‌ವಾಲ್‌ಗೆ ಸರಿಯಾಗಿವೆ.

**31.** ಪಟ್ಟಿ I ರಲ್ಲಿ ಲೋಹಗಳು / ಧಾತುಗಳನ್ನು ಮತ್ತು ಪಟ್ಟಿ II ರಲ್ಲಿನ ಅದಿರುಗಳೊಡನೆ ಹೊಂದಿಸಿರಿ :

| | *ಪಟ್ಟಿ I* (ಲೋಹಗಳು / ಧಾತುಗಳು) | | *ಪಟ್ಟಿ II* (ಅದಿರುಗಳು) |
|---|---|---|---|
| A. | ಕ್ಯಾಲ್ಸಿಯಂ | I. | ಹೆಮಟೈಟ್, ಲಿಮೊನೈಟ್ |
| B. | ಕಬ್ಬಿಣ | II. | ಡೊಲೊಮೈಟ್, ಫ್ಲುವೋರ್‌ಸ್ಪರ್ |
| C. | ಸೀಸ | III. | ಬಾಕ್ಸೈಟ್, ಕೋರಂಡಂ |
| D. | ಅಲ್ಯೂಮಿನಿಯಂ | IV. | ಗಲೀನಾ, ಲಾನಾರ್ಕೈಟ್ |
| E. | ಯುರೇನಿಯಂ | V. | ಕಾರ್ನಟೈಟ್, ಪಿಚ್ ಬ್ಲೆಂಡ್ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D | E |
|---|---|---|---|---|---|
| (1) | III | I | IV | V | II |
| (2) | II | I | IV | III | V |
| (3) | II | I | IV | V | III |
| (4) | II | V | III | IV | I |



www.kpscvaani.com

Scanned by CamScanner

32. ಈ ಕೆಳಗಿನ ಜಾನಪದ ನೃತ್ಯಗಳು ಮತ್ತು ರಾಜ್ಯಗಳ ಜೋಡಿಯನ್ನು ಪರಿಗಣಿಸಿ :

| ಜಾನಪದ ನೃತ್ಯ | | ರಾಜ್ಯ |
|---|---|---|
| A. ಬಿದೇಸಿಯಾ | : | ಝಾರ್ಖಂಡ್ |
| B. ಕಜ್ರಿ | : | ಉತ್ತರ ಪ್ರದೇಶ್ |
| C. ಡಂಗಿ | : | ಹಿಮಾಚಲ್ ಪ್ರದೇಶ್ |
| D. ಘುಲ್ಲಾಲ್ | : | ಕೇರಳ |

ಈ ಮೇಲಿನ ಜೋಡಿಗಳಲ್ಲಿ ಯಾವುದು /ವು ಸರಿ ?

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮತ್ತು B ಮಾತ್ರ

(2) A, B ಮತ್ತು C ಮಾತ್ರ

(3) B, C ಮತ್ತು D ಮಾತ್ರ

(4) A, B, C ಮತ್ತು D

33. ಈ ಕೆಳಗಿನ ಭಾರತದ ಭಾಷೆಗಳನ್ನು ಪರಿಗಣಿಸಿ :

A. ಗುಜರಾತಿ

B. ತಮಿಳು

C. ತೆಲುಗು

D. ಕನ್ನಡ

E. ಮಲೆಯಾಳಂ

F. ಮರಾಠಿ

ಸರ್ಕಾರವು ಮೇಲ್ಕಂಡವುಗಳಲ್ಲಿ ಯಾವ ಭಾಷೆಗಳನ್ನು ಭಾರತದ ಶಾಸ್ತ್ರೀಯ ಭಾಷೆಗಳೆಂದು ಘೋಷಿಸಿದೆ ?

(1) A, B ಮತ್ತು C ಮಾತ್ರ

(2) B, C, E ಮತ್ತು F ಮಾತ್ರ

(3) B, C, D ಮತ್ತು E ಮಾತ್ರ

(4) C, E ಮತ್ತು F ಮಾತ್ರ

34. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. ಕರ್ನಾಟಕವು ಭಾರತದಲ್ಲಿ ಅತಿ ಹೆಚ್ಚು ಕಬ್ಬಿಣದ ಅದಿರುಗಳನ್ನು ಉತ್ಪಾದಿಸುವುದು

B. ಕರ್ನಾಟಕದಲ್ಲಿನ ಬಳ್ಳಾರಿ ಜಿಲ್ಲೆ ಮಾತ್ರವೇ ಕಬ್ಬಿಣದ ಅದಿರನ್ನು ಉತ್ಪಾದಿಸುವ ಸ್ಥಳ.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು /ವು ಸರಿ ?

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) B ಮಾತ್ರ

(3) A ಮತ್ತು B ಗಳೆರಡೂ

(4) A ಆಗಲೀ ಅಥವಾ B ಆಗಲೀ ಅಲ್ಲ

35. ವಿಜಯನಗರದ ಬೆಳ್ಳಿಯ ನಾಣ್ಯವನ್ನು ಹೀಗೆಂದು ಕರೆಯ ಲಾಗುತ್ತಿತ್ತು

(1) ಗದ್ಯಾಣ

(2) ಪಣ

(3) ಕಾಸು

(4) ತರ



www.kpscvaani.com

Scanned by CamScanner

36. ಪಟ್ಟಿ I ರಲ್ಲಿ ಕರ್ನಾಟಕದ ನದಿಗಳನ್ನು ಪಟ್ಟಿ II ರಲ್ಲಿರುವ ಅವುಗಳು ರೂಪಿಸುವ ಜಲಪಾತಗಳೊಂದಿಗೆ ಹೊಂದಿಸಿ :

| ಪಟ್ಟಿ I (ನದಿಗಳು) | ಪಟ್ಟಿ II (ಜಲಪಾತಗಳು) |
|---|---|
| A. ಗಂಗವಳ್ಳಿ | I. ಉಂಚಳ್ಳಿ |
| B. ಅಘನಾಶಿನಿ | II. ಗೊಡಚಿನಮಲ್ಕಿ |
| C. ಕಾಳಿ | III. ಲಾಲಗುಳಿ |
| D. ಮಾರ್ಕಂಡೇಯ | IV. ಮಾಗೋಡು |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | III | II | I | IV |
| (2) | IV | I | III | II |
| (3) | I | IV | III | II |
| (4) | I | II | III | IV |

37. ವಿಜಯನಗರದ ಜನರನ್ನು ಕುರಿತಾದ ಕೆಳಗಿನ ಹೇಳಿಕೆಯನ್ನು ಯಾವ ಪ್ರವಾಸಿಗ ಹೇಳಿದ್ದಾನೆ ?

"ಗುಲಾಬಿಗಳು ಎಲ್ಲೆಡೆ ಮಾರಾಟವಾಗಿವೆ. ಈ ಜನರು ಗುಲಾಬಿಯಿಲ್ಲದೆ ಬದುಕಲಾರರು ಮತ್ತು ಅವರು ಅವುಗಳನ್ನು ಆಹಾರದಷ್ಟೇ ಆವಶ್ಯಕವೆಂಬುದಾಗಿ ನೋಡಿಕೊಳ್ಳುವರು......"

(1) ನಿಕಿತಿನ್
(2) ಅಬ್ದುರ್ ರಜಾಕ್
(3) ನ್ಯೂನಿಜ್
(4) ಬಾರ್ಬೋಸ

38. ಹಂಪಿಯ ರಾಜವೈಭವದ ಆವರಣದೊಳಗೆ ಸುಂದರವಾದ ಕಲ್ಲಿನ ವೇದಿಕೆಯಾದ ಮಹಾನವಮಿ ದಿಬ್ಬವು ವಿಜಯನಗರದ ಅರಸ ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಿತವಾಗಿದ್ದು, ಅವನು ಈ ಕೆಳಕಂಡ ಪ್ರದೇಶದ ಮೇಲೆ ಗಳಿಸಿದ ದಿಗ್ವಿಜಯದ ಸ್ಮರಣೆಗಾಗಿ ನಿರ್ಮಿಸಿದನು ?

(1) ಉದಯಗಿರಿ
(2) ಆದಿಲ್‌ಶಾಹಿ
(3) ಬಹಮನಿ
(4) ಶ್ರೀಲಂಕಾ

39. ಈ ಕೆಳಗಿನ ನಾಲ್ಕು ಸಾರ್ವಜನಿಕ ವಲಯದ ಸಾಮಾನ್ಯ ವಿಮಾ ಕಂಪನಿಗಳನ್ನು ಪರಿಗಣಿಸಿ :

A. ನ್ಯಾಷನಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್
B. ನ್ಯೂ ಇಂಡಿಯಾ ಅಶೂರೆನ್ಸ್ ಕಂಪನಿ ಲಿಮಿಟೆಡ್
C. ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್
D. ಓರಿಯಂಟಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್

ಈ ಮೇಲ್ಕಂಡ ಯಾವ ಕಂಪನಿಗಳು "ಅಗ್ರಿಕಲ್ಚರಲ್ ಇನ್ಸೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿಮಿಟೆಡ್‌ನ (AICIL)" ರಚನೆಯಲ್ಲಿ ಭಾಗವಹಿಸಿದ್ದವು ?

(1) C ಮತ್ತು D ಮಾತ್ರ
(2) A, B ಮತ್ತು C ಮಾತ್ರ
(3) B, C ಮತ್ತು D ಮಾತ್ರ
(4) A, B, C ಮತ್ತು D

40. ಈ ಕೆಳಕಂಡ ಯಾವ ಚಳುವಳಿಗಳ ಅವಧಿಯಲ್ಲಿ ಮಹಾತ್ಮಾಗಾಂಧಿಯವರು ಈ ರೀತಿ ಬರೆದರು "ವೈಯಕ್ತಿಕವಾಗಿ ನಾನು ದಾಸ್ಯದಿಂದ ಬಳಲಿದ್ದಾಗ್ಯೂ ಅರಾಜಕತ್ವದ ಅಪಾಯಕ್ಕೂ ಸಿದ್ಧನಾಗಿದ್ದೇನೆ." ?

(1) ಹೋಂ ರೂಲ್ ಚಳುವಳಿ
(2) ಅಸಹಕಾರ ಚಳುವಳಿ
(3) ನಾಗರಿಕ ಉಲ್ಲಂಘನಾ ಚಳುವಳಿ
(4) ಕ್ವಿಟ್ ಇಂಡಿಯಾ ಚಳುವಳಿ



www.kpscvaani.com
Scanned by CamScanner

41. ಬೇಸೆಲ್ III ಶಿಷ್ಟಾಚಾರಗಳನ್ನು ಈ ಕೆಳಗಿನ ಯಾವುದರ ಸಲುವಾಗಿ ನಿಗದಿಪಡಿಸಲಾಯಿತು

(1) ಹಣದ ಕ್ರಮಬದ್ಧಗೊಳಿಸುತ್ತಿರುವಿಕೆಯನ್ನು ಪತ್ತೆ ಹಚ್ಚುವುದು ಮತ್ತು ತಡೆಗಟ್ಟುವುದು

(2) ಆಹಾರ ಮತ್ತು ಮಿಠಾಯಿಗಾರಿಕೆ (ಕನ್‌ಫೆಕ್ಷನರಿ) ಯಲ್ಲಿನ ಕಲಬೆರಕೆಯನ್ನು ತಡೆಗಟ್ಟುವುದು

(3) ಬ್ಯಾಂಕುಗಳ ಆಘಾತಗಳನ್ನೆದುರಿಸುವ ಸಾಮರ್ಥ್ಯವನ್ನು ಸುಧಾರಿಸುವುದು

(4) ಭಯೋತ್ಪಾದನೆಯಿಂದ ನಾಗರಿಕ ವಾಯುಯಾನಕ್ಕೆ ಉಂಟಾಗಿರುವ ಬೆದರಿಕೆಗಳ ನಿವಾರಣೆ ಮಾಡುವುದು

42. ಭಾರತೀಯ ರಿಸರ್ವ್ ಬ್ಯಾಂಕ್‌ನ ತೆರೆದ ಮಾರುಕಟ್ಟೆಯ ಕಾರ್ಯಾಚರಣೆಗಳು ಇದಕ್ಕೆ ಸಂಬಂಧಿಸಿದೆ

(1) ಷೇರುಗಳನ್ನು ಕೊಳ್ಳುವುದು ಮತ್ತು ಮಾರುವುದು

(2) ವಿದೇಶೀ ವಿನಿಮಯದ ಹರಾಜು

(3) ಭದ್ರತೆಗಳಲ್ಲಿ ವ್ಯಾಪಾರ

(4) ಚಿನ್ನದ ವ್ಯವಹಾರ

43. ಒಂದು ಶ್ರೇಷ್ಠ ನ್ಯಾಯಾಲಯದಿಂದ ಜಾರಿಯಾದ 'ರಿಟ್ ಆಫ್ ಮ್ಯಾಂಡಮಸ್' (ಆಜ್ಞಾಪತ್ರ) ವು

(1) ಒಬ್ಬ ವ್ಯಕ್ತಿ ಅಥವಾ ಸಾರ್ವಜನಿಕ ಪ್ರಾಧಿಕಾರವನ್ನು ಸಾರ್ವಜನಿಕ ಕರ್ತವ್ಯದ ರೀತಿಯ ಕೆಲಸವನ್ನು ನಿರ್ವಹಿಸುವಂತೆ ಆಜ್ಞೆ ಮಾಡುವುದು

(2) ಕಾನೂನುಬದ್ಧತೆಯಿಲ್ಲದೆ ವಶದಲ್ಲಿರಿಸಿಕೊಂಡಿರುವ ವ್ಯಕ್ತಿಯನ್ನು 24 ಗಂಟೆಗಳ ಒಳಗಾಗಿ ನ್ಯಾಯಾಲಯದ ಮುಂದೆ ಹಾಜರು ಪಡಿಸುವುದು

(3) ರಾಷ್ಟ್ರೀಯ ಹಿತಾಸಕ್ತಿಯ ಪ್ರಕರಣವೊಂದರ ವಿಚಾರಣೆಯನ್ನು ನಿಲ್ಲಿಸಲು ಒಬ್ಬ ವ್ಯಕ್ತಿ ಅಥವಾ ಸಾರ್ವಜನಿಕ ಪ್ರಾಧಿಕಾರಕ್ಕೆ ಆಜ್ಞೆ ಮಾಡುವುದು

(4) ಮೇಲಿನ ಎಲ್ಲಾ ಪ್ರಕರಣಗಳಿಗೂ

44. ಈ ಕೆಳಗಿನವುಗಳಲ್ಲಿ ಯಾವುದನ್ನು ಭಾರತೀಯ ಪೌರನ ಕರ್ತವ್ಯವೆಂದು ತಪ್ಪಾಗಿ ಪಟ್ಟಿ ಮಾಡಲಾಗಿದೆ ?

(1) ರಾಷ್ಟ್ರದ ಸಾರ್ವಭೌಮತ್ವ ಐಕ್ಯತೆ ಮತ್ತು ಸಮಗ್ರತೆಗಳನ್ನು ಎತ್ತಿ ಹಿಡಿಯುವುದು ಮತ್ತು ರಕ್ಷಿಸುವುದು

(2) ಭಾರತೀಯ ಜನತೆಯಲ್ಲಿ ಸಾಮಾನ್ಯ ಭ್ರಾತೃತ್ವದ ಸ್ಫೂರ್ತಿಯನ್ನು ಮತ್ತು ಸಾಮರಸ್ಯವನ್ನು ವೃದ್ಧಿಸುವುದು

(3) ಕುಟುಂಬ ಯೋಜನೆಯ ಪಾಲಿಸುವಿಕೆ ಮತ್ತು ಜನಸಂಖ್ಯಾ ನಿಯಂತ್ರಣ

(4) ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಮತ್ತು ಕಾಪಾಡುವುದು

45. 2014 ರ ಆಂಧ್ರ ಪ್ರದೇಶ್ ಪುನರ್‌ರಚನೆ ಕಾಯ್ದೆಯ ಮೇರೆಗೆ ಹೈದರಾಬಾದ್‌ನ್ನು ಆಂಧ್ರ ಪ್ರದೇಶ ಮತ್ತು ತೆಲಂಗಾಣಗಳೆರಡಕ್ಕೂ (ಒಂದೇ) ಸಾಮಾನ್ಯ ರಾಜಧಾನಿಯೆಂದು ಎಷ್ಟು ವರ್ಷಗಳವರೆಗೆ ಗ್ರಹಿಸಲಾಗಿತ್ತು ?

(1) 5 ವರ್ಷಗಳು

(2) 7 ವರ್ಷಗಳು

(3) 10 ವರ್ಷಗಳು

(4) 12 ವರ್ಷಗಳು



www.kpscvaani.com

Scanned by CamScanner

46. ರಾಷ್ಟ್ರಪತಿಗಳು ಈ ಸಂದರ್ಭಗಳಿದ್ದಾಗ ಮಾತ್ರ ಸುಗ್ರೀವಾಜ್ಞೆಯನ್ನು ಸಾರಬಹುದು ?

(1) ಪಾರ್ಲಿಮೆಂಟ್‌ನ ಎರಡೂ ಸದನಗಳ ನಡುವೆ ಒಮ್ಮತವಿಲ್ಲದಿದ್ದಾಗ.

(2) 1 ವರ್ಷಕ್ಕೂ ಹೆಚ್ಚು ಕಾಲ ಮಸೂದೆಯು ಪಾರ್ಲಿಮೆಂಟ್‌ನಲ್ಲಿ ತಡೆಹಿಡಿಯಲ್ಪಟ್ಟಿದ್ದರೆ.

(3) ಪಾರ್ಲಿಮೆಂಟು ಅಧಿವೇಶನದಲ್ಲಿಲ್ಲದಿದ್ದರೆ.

(4) ರಾಷ್ಟ್ರಪತಿಗಳಿಂದ ಮಸೂದೆಯು ಪ್ರಾಯೋಜಿತವಾಗಿದ್ದು ಆದರೆ ಪಾರ್ಲಿಮೆಂಟ್‌ನಿಂದ ಇದು ತಿರಸ್ಕೃತವಾಗಿದ್ದಲ್ಲಿ.

47. ಹಣದುಬ್ಬರವನ್ನು ತೆರಿಗೆಪದ್ಧತಿಯ ಹಿಂಚಲನೆಯ ರೂಪ ಎನ್ನಲಾಗಿದೆ ಏಕೆಂದರೆ

(1) ಇದು ಆಮದುಗಳ ಮೇಲೆ ಪ್ರಭಾವ ಬೀರುತ್ತದೆ ಮತ್ತು ಆಮದುಗಳನ್ನು ಆಕರ್ಷಣೀಯಗೊಳಿಸುವುದು

(2) ಗುಣಮಟ್ಟದ ಖಚಿತೆಗಾಗಿ, ರಫ್ತು ಸರಕುಗಳನ್ನು ಪರಿಶೀಲನೆ ಮಾಡುವುದು

(3) ವಿದೇಶೀ ರಾಜ್ಯಗಳಲ್ಲಿ ಜಂಟಿ ಸಾಹಸೋದ್ಯಮಗಳಿಗೆ ಹಣಕಾಸು

(4) ವಿದೇಶಿಗಳಲ್ಲಿ ಜಂಟಿ ಸಾಹಸೋದ್ಯಮಗಳ ಶೇರು ಬಂಡವಾಳಗಳಲ್ಲಿ ತೊಡಗಿಕೊಳ್ಳಲು ಭಾರತೀಯ ಪಕ್ಷಗಳಿಗೆ ಸಾಲಗಳನ್ನು ಒದಗಿಸುವುದು

48. ಈ ಕೆಳಗಿನವುಗಳಲ್ಲಿ ಯಾವುದು ಭಾರತೀಯ ಎಕ್ಸಿಂ ಬ್ಯಾಂಕ್‌ನ ಕಾರ್ಯವಲ್ಲ

(1) ಸರಕು ಮತ್ತು ಸೇವೆಗಳ ರಫ್ತು ಮತ್ತು ಆಮದುಗಳಿಗಾಗಿ ಹಣಕಾಸು

(2) ಗುಣಮಟ್ಟದ ಭರವಸೆಗಾಗಿ, ರಫ್ತಾಗುವ ಸರಕುಗಳ ತಪಾಸಣೆ

(3) ವಿದೇಶಿ ದೇಶಗಳಲ್ಲಿ ಜಂಟಿ ಉದ್ಯಮಗಳಿಗಾಗಿ ಹಣಕಾಸು

(4) ವಿದೇಶಗಳಲ್ಲಿ ಜಂಟಿ ಉದ್ಯಮಗಳ ಬಂಡವಾಳವನ್ನು ಹಂಚಿಕೊಳ್ಳಲು ಭಾರತೀಯ ಪಕ್ಷಗಳಿಗೆ ಸಾಲಗಳು

49. ಕೆಳಗಿನ ಎರಡು ಹೇಳಿಕೆಗಳನ್ನು ಪರಿಗಣಿಸಿ :

A. ಭದ್ರಾವತಿ ಐರನ್ ಮತ್ತು ಸ್ಟೀಲ್ ಕಾರ್ಖಾನೆಯು ಖಾಸಗಿ ಕಂಪನಿಯಾಗಿ ಪ್ರಾರಂಭವಾಯಿತು.

B. ಇದನ್ನು "ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಕಂಪನಿ ಲಿಮಿಟೆಡ್ (ವಿ.ಐ.ಎಸ್.ಎಲ್.)" ಎಂದು ಪ್ರಾರಂಭಿಸಲಾಯಿತು.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು /ವು ಸರಿ ?

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) B ಮಾತ್ರ

(3) A ಮತ್ತು B ಎರಡೂ

(4) A ಆಗಲೀ ಅಥವಾ B ಆಗಲೀ ಅಲ್ಲ

50. ಕೆಳಗಿನ ಸಮಿತಿಗಳಲ್ಲಿ ಯಾವುದು ವಿವಿಧ ಸಚಿವಾಲಯಗಳ ಬಜೆಟ್ ಪ್ರಸ್ತಾವಗಳನ್ನು ಪರಿಶೀಲಿಸುತ್ತದೆ

(1) ಅಂದಾಜು ಸಮಿತಿ

(2) ಪಬ್ಲಿಕ್ ಅಕೌಂಟ್ಸ್ ಕಮಿಟಿ

(3) ನಿಯಮಗಳ ಸಮಿತಿ

(4) ಸಾರ್ವಜನಿಕ ಉಸ್ತುವಾರಿಗಳ ಸಮಿತಿ



www.kpscvaani.com

Scanned by CamScanner

**51.** ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. ಇದನ್ನು 1911 ರಲ್ಲಿ ನಿರ್ಮಿಸಲಾಯಿತು.

B. ಕಿಂಗ್ ಜಾರ್ಜ್ V ಅವರ ಭೇಟಿಯನ್ನು ಈ ಸ್ಮಾರಕದೊಂದಿಗೆ ಜೋಡಿಸಲಾಗಿದೆ (ಸಂಬಂಧಿಸಲಾಗಿದೆ).

ಮೇಲೆ ನೀಡಿದ ಹೇಳಿಕೆಗಳು ಈ ಕೆಳಗಿನ ಯಾವುದನ್ನು ಕುರಿತದ್ದಾಗಿದೆ ?

(1) ಭಾರತದ ಗೇಟ್ ವೇ

(2) ಇಂಡಿಯಾ ಗೇಟ್

(3) ದೆಹಲಿ ದರ್ಬಾರ್

(4) ದೆಹಲಿ ಗೇಟ್

**52.** ಈ ಪೈಕಿ ಯೋಜನಾ ಆಯೋಗದ ಮೊದಲ ಅಧ್ಯಕ್ಷರು ಯಾರು ?

(1) ಡಾ. ರಾಜೇಂದ್ರ ಪ್ರಸಾದ್

(2) ಜವಾಹರ್‌ಲಾಲ್ ನೆಹ್ರೂ

(3) ಸರ್ದಾರ ವಲ್ಲಭಭಾಯಿ ಪಟೇಲ್

(4) ಜೆ.ಬಿ. ಕೃಪಲಾನಿ

**53.** "ರೋಗನಿರೋಧಕ ಶಾಸ್ತ್ರದ ಪಿತಾಮಹ" ಎನಿಸಿದವರು ಯಾರು ?

(1) ರಾಬರ್ಟ್ ಕೊಚ್

(2) ಲೂಯಿಸ್ ಪ್ಯಾಶ್ಚರ್

(3) ಎಡ್ವರ್ಡ್ ಜೆನ್ನರ್

(4) ಲ್ಯಾಂಡ್‌ಸ್ಟೈನರ್

**54.** ಪಟ್ಟಿ I ರಲ್ಲಿನ ಕಪ್/ಟ್ರೋಫಿಗಳನ್ನು ಪಟ್ಟಿ II ರಲ್ಲಿರುವ ತತ್ಸಂಬಂಧಿ ಕ್ರೀಡೆಗಳೊಡನೆ ಹೊಂದಿಸಿರಿ :

| | *ಪಟ್ಟಿ I* (ಕಪ್/ ಟ್ರೋಫಿ) | | *ಪಟ್ಟಿ II* (ತತ್ಸಂಬಂಧಿ ಕ್ರೀಡೆ) |
|---|---|---|---|
| A. | ದೇವ್‌ಧರ್ ಟ್ರೋಫಿ | I. | ಫುಟ್‌ಬಾಲ್ |
| B. | ಡ್ಯುರಾಂಡ್ ಕಪ್ | II. | ಕ್ರಿಕೆಟ್ |
| C. | ಡೇವಿಸ್ ಕಪ್ | III. | ಬ್ಯಾಡ್‌ಮಿಂಟನ್ |
| D. | ಥಾಮಸ್ ಕಪ್ | IV. | ಲಾನ್ ಟೆನಿಸ್ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | I | II | III | IV |
| (2) | II | I | III | IV |
| (3) | II | I | IV | III |
| (4) | I | II | IV | III |

**55.** ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಷನಲ್ ಎಂಬುದು (ಅಂತರರಾಷ್ಟ್ರೀಯ ಪಾರದರ್ಶಕತೆ)

(1) ಜಾಗತಿಕ ನಾಗರಿಕ ಸಂಸ್ಥೆ ಯಾಗಿದ್ದು ಭ್ರಷ್ಟಾಚಾರ ವಿರುದ್ಧ ಹೋರಾಡುವುದು

(2) ಮಾನವ ಹಕ್ಕುಗಳ ರಕ್ಷಣೆಗಾಗಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರೇತರ ಸಂಸ್ಥೆ

(3) ನಾಗರಿಕ ಯುದ್ಧಗಳಲ್ಲಿ ನಿರಾಶ್ರಿತರ ಸಹಾಯಕ್ಕಾಗಿ ಇರುವ ವಿಶ್ವಸಂಸ್ಥೆಯ ಏಜೆನ್ಸಿ

(4) ಪರಿಸರ ರಕ್ಷಣೆಗಾಗಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆ



www.kpscvaani.com

Scanned by CamScanner

56. ಕ್ಲೋರೋಫಾರಂಅನ್ನು ಬಣ್ಣದ ಬಾಟಲಿ ಅಥವಾ ಧಾರಕದಲ್ಲಿ ಸಂಗ್ರಹಿಸಿಡಲಾಗುವುದು ಏಕೆಂದರೆ ಅದು ಬೆಳಕು ಮತ್ತು ಗಾಳಿಯೊಂದಿಗೆ ನೇರವಾಗಿ ವರ್ತಿಸಿ ವಿಷಕಾರಿ ವಸ್ತುವನ್ನು ಉಂಟುಮಾಡುವದು. ಆ ವಿಷಕಾರಿ ವಸ್ತು ಯಾವುದು ?

(1) ಫಾಸ್ಫೀನ್

(2) ಫಾಸ್ಜೀನ್

(3) ಮಸ್ಟರ್ಡ್ ಅನಿಲ (ವಿಷಾನಿಲ)

(4) ಕಾರ್ಬನ್ ಮೊನೊಕ್ಸೈಡ್

57. ದ್ರವದ ಮೇಲ್ಮೈಸೆಳೆತವು ಕಡಿಮ ಆಗಬೇಕಾದರೆ

A. ದ್ರವದ ತಾಪವನ್ನು ಹೆಚ್ಚಿಸಬೇಕು

B. ದ್ರವದಲ್ಲಿ ಡಿಟರ್ಜೆಂಟನ್ನು ಸೇರಿಸಬೇಕು

C. ದ್ರವದ ತಾಪವನ್ನು ತಗ್ಗಿಸಬೇಕು

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು /ವು ಸರಿ ?

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) B ಮತ್ತು C ಮಾತ್ರ

(2) A ಮತ್ತು B ಮಾತ್ರ

(3) A ಮಾತ್ರ

(4) B ಮಾತ್ರ

58. ಚಳಿಗಾಲದಲ್ಲಿ ಕಬ್ಬಿಣದ ತುಂಡು ಮತ್ತು ಮರದ ತುಂಡನ್ನು ಬೆಳಗಿನವೇಳೆ ಮುಟ್ಟಿದರೆ ಆಗ ಕಬ್ಬಿಣದ ತುಂಡು ಹೆಚ್ಚು ತಣ್ಣಗಿರಲು ಕಾರಣ

(1) ಕಬ್ಬಿಣದ ತುಂಡಿನ ತಾಪವು ಮರದ ತುಂಡಿನದಕ್ಕಿಂತ ಕಡಿಮೆ.

(2) ಮರಕ್ಕೆ ಹೋಲಿಸಿದರೆ ಕಬ್ಬಿಣವು ಉಷ್ಣದ (ಹೀನ ವಾಹಕ) ಅವಾಹಕ.

(3) ಮರಕ್ಕೆ ಹೋಲಿಸಿದರೆ ಮರಕ್ಕಿಂತಲೂ ಕಬ್ಬಿಣ ಉಷ್ಣದ ಉತ್ತಮ ವಾಹಕ.

(4) ಕಬ್ಬಿಣದ ತುಂಡು ಮರದ ತುಂಡಿಗಿಂತಲೂ ಭಾರ.

59. ಈ ಹೇಳಿಕೆಗಳನ್ನು ಪರಿಗಣಿಸಿ :

A. ಚಂಡಮಾರುತದಲ್ಲಿ ಕಡಿಮೆ ಒತ್ತಡ ಪ್ರದೇಶವು ಕೇಂದ್ರದಲ್ಲಿದ್ದು ಅದರಸುತ್ತಲೂ ಅಧಿಕ ಒತ್ತಡ ಪ್ರದೇಶಗಳಿರುವವು.

B. ಚಂಡಮಾರುತದಲ್ಲಿ ಕಡಿಮೆ ಒತ್ತಡ ಪ್ರದೇಶವು ಅಧಿಕ ಒತ್ತಡ ಪ್ರದೇಶದನ್ನಾವರಿಸುವವು.

C. ಪ್ರತಿಕೂಲಚಂಡಮಾರುತದಲ್ಲಿ ಅಧಿಕ ಒತ್ತಡ ಪ್ರದೇಶವನ್ನು ಕಡಿಮೆ ಒತ್ತಡ ಪ್ರದೇಶಗಳಾವರಿಸುವವು.

D. ಪ್ರತಿಕೂಲಚಂಡಮಾರುತದಲ್ಲಿ ಕಡಿಮೆ ಒತ್ತಡ ಪ್ರದೇಶಗಳು ಹೆಚ್ಚು ಒತ್ತಡ ಪ್ರದೇಶಗಳಿಂದ ಸುತ್ತುವರಿದಿರುವವು.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು /ವು ಸರಿ ? ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮತ್ತು B ಮಾತ್ರ

(2) A ಮತ್ತು C ಮಾತ್ರ

(3) A ಮತ್ತು D ಮಾತ್ರ

(4) B ಮತ್ತು D ಮಾತ್ರ



www.kpscvaani.com

Scanned by CamScanner

**60.** ಭೂಮಿಯ ಭ್ರಮಣೆ ಇಲ್ಲದೇ ಹೋದರೆ ಆಗುವ ಪರಿಣಾಮವು

A. ಸೂರ್ಯೋದಯ ಮತ್ತು ಸೂರ್ಯಾಸ್ತವಿಲ್ಲ.

B. ಹಗಲು ರಾತ್ರಿಗಳ ಚಕ್ರ ಉಂಟಾಗುವುದಿಲ್ಲ

C. ಒಂದೇ ಒಂದು ಋತು.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು /ವು ಸರಿ ?

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) A ಮತ್ತು B ಮಾತ್ರ

(3) B ಮತ್ತು C ಮಾತ್ರ

(4) A, B ಮತ್ತು C

**61.** ಆಟಗಾರರು (ಪಟ್ಟಿ I) ಮತ್ತು ತತ್ಸಂಬಂಧಿ ಕ್ರೀಡೆಗಳು (ಪಟ್ಟಿ II) ಹೊಂದಿಸಿ :

| *ಪಟ್ಟಿ I* (ಆಟಗಾರರು) | | *ಪಟ್ಟಿ II* (ತತ್ಸಂಬಂಧಿ ಕ್ರೀಡೆಗಳು) | |
|---|---|---|---|
| A. | ಜೀವ್ ಮಿಲ್ಕಾ ಸಿಂಗ್ | I. | ಕ್ರಿಕೆಟ್ |
| B. | ಯುಜುವೇಂದ್ರ ಚಾಹಲ್ | II. | ಗೋಲ್ಫ್ |
| C. | ಜಯಂತ ತಾಲ್ಲೂಕ್‌ದಾರ್ | III. | ಪವರ್ ಲಿಫ್ಟಿಂಗ್ |
| D. | ಎನ್. ಕುಂಜರಾಣಿ ದೇವಿ | IV. | ಬಿಲ್ಲುವಿದ್ಯೆ |
| | | V. | ಸಾಕರ್ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | I | II | III | IV |
| (2) | II | I | III | IV |
| (3) | II | I | IV | III |
| (4) | I | II | IV | III |

**62.** ಪ್ರತಿ 4 ವರ್ಷಕ್ಕೊಮ್ಮೆ ಅಧಿಕ ವರ್ಷ ಬರಲು ಕಾರಣವೇನು ?

(1) ಭೂಮಿಯು ತನ್ನ ಕಕ್ಷೆಯಿಂದ ನಾಲ್ಕು ವರ್ಷಕ್ಕೊಮ್ಮೆ ವರ್ಗಾವಣೆ ಆಗುವುದು.

(2) ಭೂ ಪರಿಭ್ರಮಣವು ನಾಲ್ಕು ವರ್ಷಗಳಿಗೊಮ್ಮೆ ತುಸು ನಿಧಾನವಾಗುವುದು

(3) ವರ್ಷದ ಅವಧಿಯು ದಿನಗಳ ಸಂಖ್ಯೆಯ ಪೂರ್ಣಾಂಕವಲ್ಲ.

(4) ಇದೊಂದು ರೂಢಿ ಮಾತ್ರ.

**63.** ಸೌರದಿನ ಮತ್ತು ನಾಕ್ಷತ್ರಿಕ ದಿನಗಳಿಗೂ ಇರುವ ಸಂಬಂಧವೇನು ?

(1) ಸೌರದಿನವು ನಾಕ್ಷತ್ರಿಕ ದಿನಕ್ಕಿಂತ ಚಿಕ್ಕದು

(2) ಸೌರದಿನವು ನಾಕ್ಷತ್ರಿಕ ದಿನಕ್ಕಿಂತ ದೊಡ್ಡದು

(3) ಎರಡೂ ಒಂದೇ ಸಮ

(4) ಇವುಗಳ ನಡುವೆ ಯಾವುದೇ ಸಂಬಂಧವಿಲ್ಲ

**64.** ಇವನ್ನು ಹೊಂದಿಸಿ :

| *ಪಟ್ಟಿ I* | | *ಪಟ್ಟಿ II* | |
|---|---|---|---|
| A. | ಪೇಶ್ವೆಗಳು | I. | ನಾಗ್‌ಪುರ್ |
| B. | ಭೋಸ್ಲೆಗಳು | II. | ಗ್ವಾಲಿಯರ್ |
| C. | ಗಾಯಕ್‌ವಾಡ್‌ಗಳು | III. | ಬರೋಡಾ |
| D. | ಹೋಳ್ಕರ್‌ಗಳು | IV. | ಪೂನಾ |
| E. | ಸಿಂಧಿಯಾಗಳು | V. | ಇಂದೋರ್ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D | E |
|---|---|---|---|---|---|
| (1) | I | II | III | IV | V |
| (2) | IV | III | I | II | V |
| (3) | IV | I | V | II | III |
| (4) | IV | I | III | V | II |



www.kpscvaani.com

Scanned by CamScanner

65. ತಾಜ್ ಮಹಲ್ ಕುರಿತಂತೆ ಈ ಪೈಕಿ ಯಾವ ಹೇಳಿಕೆ ಸರಿಯಲ್ಲ?

(1) ಅದು ಭವ್ಯವಾದ ಗೋರಿ

(2) ಅದನ್ನು ಕಟ್ಟಿದ್ದು ಷಹಜಹಾನ್

(3) ಅದು ಆಗ್ರಾ ಕೋಟೆಯ ಹೊರಭಾಗದಲ್ಲಿದೆ

(4) ಅದನ್ನು ನಿರ್ಮಿಸಿದ ಕುಶಲ ಕರ್ಮಿಗಳ ಹೆಸರುಗಳನ್ನು ಅದರ ಮೇಲೆ ಕೆತ್ತಲಾಗಿದೆ

66. ಹದಿನೇಳನೇ ಶತಮಾನದಲ್ಲಿ ಸಿಖ್ಖರು ಧಾರ್ಮಿಕ ಪಂಗಡದಿಂದ ಉಗ್ರಗಾಮಿ ವಿರೋಧಿ ಮುಸ್ಲಿಂ ಸಹೋದರತ್ವಕ್ಕೆ ರೂಪಾಂತರಗೊಂಡರು. ಈ ರೂಪಾಂತರವನ್ನು ಪ್ರಾರಂಭಿಸಿದ ಸಿಖ್ ಗುರು

(1) ಗುರು ಅಮರ್ ದಾಸ್

(2) ಗುರು ಅರ್ಜುನ್ ದೇವ್

(3) ಗುರು ಹರ್‌ಗೋವಿಂದ್

(4) ಗುರು ತೇಜ್‌ಬಹಾದೂರ್

67. ಯಾವ ಅಂತರರಾಷ್ಟ್ರೀಯ ಪಂದಾವಳಿಯ ಘಟನೆಯ ಆದರ್ಶ ಸೂಕ್ತಿಯಾದ 'ವೇಗಕರ, ಅಧಿಕ, ಶಕ್ತಿಯುತ' ಎಂಬುದಕ್ಕೆ "ಸಿಟಿಯಸ್, ಆಲ್ಟಿಯಸ್, ಫೋರ್ಟಿಯಸ್" ಎಂಬುದು ಲ್ಯಾಟಿನ್ ಆಗಿದೆ ?

(1) ಫಿಫಾ ವಿಶ್ವಕಪ್

(2) ಒಲಿಂಪಿಕ್ಸ್

(3) ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್

(4) ಆಫ್ರೋ–ಏಶಿಯನ್ ಕ್ರೀಡೆಗಳು

68. ವ್ಯಕ್ತಿಗಳು (ಪಟ್ಟಿ I) ಮತ್ತು ಕ್ಷೇತ್ರಗಳೊಡನೆ (ಪಟ್ಟಿ II) ಹೊಂದಿಸಿ :

| ಪಟ್ಟಿ I (ವ್ಯಕ್ತಿಗಳು) | ಪಟ್ಟಿ II (ಕ್ಷೇತ್ರ) |
|---|---|
| A. ಭಜನ ಸೊಪೋರಿ | I. ಭರತನಾಟ್ಯ |
| B. ಬಿರ್ಜು ಮಹಾರಾಜ್ | II. ಸಂತೂರ್ ವಾದಕರು |
| C. ಪ್ರಿಯದರ್ಶಿನಿ ಗೋವಿಂದ್ | III. ಮೃದಂಗ ಪಟು |
| D. ಟಿ.ವಿ. ಗೋಪಾಲ ಕೃಷ್ಣನ್ | IV. ಕಥಕ್ ನರ್ತಕರು |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | I | II | III | IV |
| (2) | II | I | III | IV |
| (3) | II | I | IV | III |
| (4) | II | IV | I | III |

69. ಭಾರತಕ್ಕೆ ಸಂಬಂಧಿಸಿದಂತೆ ಇವುಗಳನ್ನು ಪರಿಗಣಿಸಿ :

A. ಬ್ಯಾಂಕುಗಳ ರಾಷ್ಟ್ರೀಕರಣ

B. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ರಚನೆ

C. ಬ್ಯಾಂಕು ಶಾಖೆಗಳಿಂದ ಗ್ರಾಮಗಳ ದತ್ತು

ಈ ಮೇಲಿನ ಹೇಳಿಕೆಗಳಲ್ಲಿ ಯಾವುವು ಸರಿ ?

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮತ್ತು B ಮಾತ್ರ

(2) A ಮತ್ತು C ಮಾತ್ರ

(3) B ಮತ್ತು C ಮಾತ್ರ

(4) A, B ಮತ್ತು C



www.kpscvaani.com

Scanned by CamScanner

**70.** ನ್ಯೂಟನ್‌ನ ಗುರುತ್ವಾಕರ್ಷಣೆಯ ನಿಯಮವನ್ನು ಈ ಕೆಳಗಿನವುಗಳಲ್ಲಿ ಯಾವುದಕ್ಕೆ ಅನ್ವಯಿಸಲಾಗಿದೆ

(1) ಭೂಮಿ ಮತ್ತು ಸೂರ್ಯನ ನಡುವಣ ಬಲ ಮಾತ್ರ

(2) ಭೂಮಿ ಮತ್ತು ಚಂದ್ರನ ನಡುವಣ ಬಲ ಮಾತ್ರ

(3) ಭೂಮಿ ಮತ್ತು ಇತರ ಕಾಯ ನಡುವಣ ಬಲ ಮಾತ್ರ

(4) ಬ್ರಹ್ಮಾಂಡದಲ್ಲಿರುವ ಯಾವುದೇ ಎರಡು ಕಾಯಗಳ ನಡುವಣ ಬಲ

**71.** ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ "ಅಷ್ಟದಿಗ್ಗಜ" ರಲ್ಲಿ ಇದ್ದ ಕನ್ನಡ ಕವಿ ಯಾರು ?

(1) ತೆನಾಲಿ ರಾಮ

(2) ಧೂರ್ಜಟಿ

(3) ನಂದಿ ತಿಮ್ಮಣ್ಣ

(4) ಅಲ್ಲಸಾನಿ ಪೆದ್ದನ್ನ

**72.** ಸಂವಿಧಾನದಿಂದ ಖಾತರಿಪಡಿಸಲಾಗಿರುವ ಮೂಲಭೂತ ಹಕ್ಕುಗಳ ಮೇಲೆ ಸಮಂಜಸವಾದ ನಿರ್ಬಂಧಕ್ಕೆ ಕಾರಣವಾಗುವ ಅಂಶವನ್ನು ನಿರ್ಧರಿಸುವ ಅಧಿಕಾರವನ್ನು ಈ ಕೆಳಗಿನ ಯಾರು ಹೊಂದಿದ್ದಾರೆ ?

(1) ಭಾರತದ ಅಧ್ಯಕ್ಷರು

(2) ನ್ಯಾಯಾಲಯಗಳು

(3) ಸಂಸತ್ತಿನ ಕೆಳಮನೆಗಳಲ್ಲಿ ಸರಳ ಬಹುಮತ

(4) ಪಾರ್ಲಿಮೆಂಟ್‌ನ ಎರಡೂ ಸದನಗಳಲ್ಲಿ 2/3 ಬಹುಮತ

**73.** ಈ ಕೆಳಗಿನವುಗಳಲ್ಲಿ ಯಾವ ನದಿಯು ಆಫ್ರಿಕಾ ಖಂಡದ ಪ್ರಮುಖ ನದಿಯಾಗಿಲ್ಲ?

(1) ನೈಲ್

(2) ಕಾಂಗೊ

(3) ವೋಲ್ಗಾ

(4) ಜಾಂಬೆಸಿ

**74.** ಜಪಾನ್‌ನ ದ್ವೀಪಾವಳಿಗಳಲ್ಲಿರುವ ದೊಡ್ಡ ದ್ವೀಪ, ಕೆಳಗಿನವುಗಳಲ್ಲಿ ಯಾವುದು ?

(1) ಹೊಕ್ಕೈಡೊ

(2) ಹೊನ್‌ಷೂ

(3) ಶಿಕೊಕು

(4) ಕ್ಯುಶು

**75.** ಪಟ್ಟಿ I ರಲ್ಲಿನ ಸಾಂವಿಧಾನಿಕ ಸಭೆಗಳ ಸಮಿತಿಗಳನ್ನು ಪಟ್ಟಿ II ರಲ್ಲಿರುವ ಅಧ್ಯಕ್ಷರೊಂದಿಗೆ ಹೊಂದಿಸಿ :

| *ಪಟ್ಟಿ I (ಸಮಿತಿಗಳು)* | *ಪಟ್ಟಿ II (ಅಧ್ಯಕ್ಷರು)* |
|---|---|
| A. ಕರಡು ಸಮಿತಿ | I. ವಲ್ಲಭ್‌ಭಾಯಿ ಪಟೇಲ್ |
| B. ಮೂಲಭೂತ ಮತ್ತು ಅಲ್ಪಸಂಖ್ಯಾತ ಹಕ್ಕುಗಳನ್ನು ಕುರಿತಾದ ಸಮಿತಿ | II. ಜವಾಹರ್‌ಲಾಲ್ ನೆಹರೂ |
| C. ಕೇಂದ್ರ ಸಂವಿಧಾನ ಸಮಿತಿ | III. ಕೆ.ಎಂ. ಮುನ್‌ಷಿ |
| D. ವ್ಯವಹಾರ ಸುವ್ಯವಸ್ಥಾಕ್ರಮದ ಸಮಿತಿ | IV. ಬಿ.ಆರ್. ಅಂಬೇಡ್ಕರ್ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | I | II | III | IV |
| (2) | IV | II | I | III |
| (3) | IV | I | III | II |
| (4) | IV | I | II | III |



www.kpscvaani.com

Scanned by CamScanner

76. 2011 ರ ಜನಗಣತಿಯ ಮೇರೆಗೆ ಸಾಕ್ಷರತಾ ಆಧಾರದ ಮೇರೆಗೆ ಕೆಳಗಿನ ಯಾವ ಗುಂಪು ರಾಜ್ಯಗಳ ಅವರೋಹಣ ಕ್ರಮವನ್ನು ಪ್ರತಿನಿಧಿಸುತ್ತದೆ ?

(1) ಕೇರಳ, ಗೋವಾ, ಮಿಜೋರಾಂ ಮತ್ತು ತ್ರಿಪುರಾ

(2) ಕೇರಳ, ಮಿಜೋರಾಂ, ತ್ರಿಪುರಾ ಮತ್ತು ಗೋವಾ

(3) ಕೇರಳ, ತ್ರಿಪುರಾ, ಗೋವಾ ಮತ್ತು ಮಿಜೋರಾಂ

(4) ಕೇರಳ, ಗೋವಾ, ತ್ರಿಪುರಾ ಮತ್ತು ಮಿಜೋರಾಂ

77. ಪಟ್ಟಿ I ರಲ್ಲಿನ ವೃಕ್ಷಗಳ ಬಗೆಗಳನ್ನು ಪಟ್ಟಿ II ರಲ್ಲಿರುವ ಅವು ದೊರೆಯುವ ಸ್ಥಳ / ಭೂಮಿಗಳು / ಕಾಡುಗಳೊಂದಿಗೆ ಹೊಂದಿಸಿ :

| ಪಟ್ಟಿ *I* (ವೃಕ್ಷದ ಬಗೆ) | ಪಟ್ಟಿ *II* (ಸ್ಥಳಗಳು / ಭೂಮಿಗಳು/ ಕಾಡುಗಳು) |
|---|---|
| A. ತೇಗ | I. ಕರ್ನಾಟಕ |
| B. ಶ್ರೀಗಂಧ | II. ಉಷ್ಣವಲಯದ ಭೂಮಿಗಳು |
| C. ದೇವದಾರು (ಡಿಯೋಡಾರ್) | III. ಮಾನ್‌ಸೂನ್ ಅರಣ್ಯಗಳು |
| D. ಮಹಾಗನಿ | IV. ಜಮ್ಮು ಮತ್ತು ಕಾಶ್ಮೀರ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | III | I | IV | II |
| (2) | I | II | III | IV |
| (3) | IV | III | II | I |
| (4) | II | IV | I | III |

78. ಚಕ್ರವರ್ತಿ ಹರ್ಷನ ದಕ್ಷಿಣದ ಮೆರವಣಿಗೆಯು ನರ್ಮದಾ ನದಿಯ ಮೇಲೆ ತಡೆಯಲ್ಪಟ್ಟದ್ದು ಇವನಿಂದ

(1) ವಿಕ್ರಮಾದಿತ್ಯ – I

(2) ವಿಕ್ರಮಾದಿತ್ಯ – II

(3) ಪುಲಕೇಶಿ – I

(4) ಪುಲಕೇಶಿ – II

79. ಭಾರತದಲ್ಲಿ ಬ್ರಿಟಿಷರ ಸಾರ್ವಭೌಮತ್ವಕ್ಕೆ ಫ್ರೆಂಚ್‌ರ ಸವಾಲು ಈ ಕೆಳಗಿನ ಯಾವ ಯುದ್ಧದೊಂದಿಗೆ ಕೊನೆಗೊಂಡಿತು ?

(1) ವಾಂಡಿವಾಷ್ ಯುದ್ಧ

(2) ಬಕ್ಸಾರ್ ಯುದ್ಧ

(3) ಶ್ರೀರಂಗ ಪಟ್ಟಣಂ ಯುದ್ಧ

(4) ಪ್ಲಾಸಿ ಯುದ್ಧ

80. ಭಾರತೀಯ ಪ್ರೀಮಿಯರ್ ಲೀಗ್ (IPL) T20 ಕ್ರಿಕೆಟ್ ಪಂದ್ಯಾವಳಿ ಯಲ್ಲಿನ ಕಿತ್ತಳೆ ಟೋಪಿಯು ಈ ಕೆಳಗಿನ ಯಾವುದರೊಂದಿಗೆ ಸಂಬಂಧಿಸಿದೆ ?

(1) ಪಂದ್ಯಾವಳಿಯಲ್ಲಿ ಅತ್ಯಧಿಕ ರನ್ ಗಳಿಸಿರುವವರು

(2) ಪಂದ್ಯಾವಳಿಯಲ್ಲಿ ಅತ್ಯಧಿಕ ವಿಕೆಟ್‌ಗಳನ್ನು ಗಳಿಸಿರುವವರು

(3) ಪಂದ್ಯಾವಳಿಯಲ್ಲಿ ಅತ್ಯಧಿಕ "ಪಂದ್ಯದ ಪುರುಷೋತ್ತಮ ಬಿರುದನ್ನು" ಗಳಿಸಿದವರು

(4) ಪಂದ್ಯಾವಳಿಯ ಅತ್ಯುತಮ ಕ್ಷೇತ್ರರಕ್ಷಕ (ಫೀಲ್ಡರ್)



www.kpscvaani.com
Scanned by CamScanner

81. ಈ ಕೆಳಗಿನ ಯಾವ ಹೇಳಿಕೆಯು ಕಾಂಗ್ರೆಸ್ ನಾಯಕರನ್ನು ಕುರಿತಾಗಿ ಸರಿಯಲ್ಲ?

(1) ಮೂರನೇ ಕಾಂಗ್ರೆಸ್‌ನ ಅಧ್ಯಕ್ಷರನ್ನಾಗಿ ಬದ್ರುದ್ದೀನ್ ತಯಾಬ್ಜಿಯವರನ್ನು ಮಾಡಿದ್ದು ಮುಸ್ಲಿಮರ ಅಭಿಪ್ರಾಯಗಳನ್ನು ಸಾಂತ್ವನಗೊಳಿಸಲಿಕ್ಕಾಗಿ.

(2) ಲಾಲಾ ಲಜಪತ್‌ರಾಯ್‌ರವರು ತಮ್ಮ ಪ್ರಾರಂಭದ ಜೀವನದಲ್ಲಿ ಆರ್ಯಸಮಾಜದಿಂದ ಆಳವಾಗಿ ಪ್ರಭಾವಿತಗೊಂಡಿದ್ದರು.

(3) ತಿಲಕರು ಸಾಂಪ್ರದಾಯಿಕ ಹಿಂದೂ ಪುನರುದ್ಧಾರಕ ವಾದಗಳನ್ನು ಸಮರ್ಥಿಸಿದ್ದು ಜಾರಿಯಾಗಲಿದ್ದ ಒಪ್ಪಿತ ಮಸೂದೆಯ ಪ್ರಾಯವನ್ನು ತಡೆಯುವ ಸಲುವಾಗಿ.

(4) ಎಲ್ಲಾ ಗಲಭೆಗಳ ಕಾಂಗ್ರೆಸ್‌ವ್ಯಕ್ತಿಗಳಿಂದಲೂ ಫಿರೋಜ್‌ಷಾ ಮೆಹ್ತಾ ರವರು ಪ್ರೀತಿಸಲ್ಪಟ್ಟರು.

82. ಈ ಕೆಳಗಿನ ಯಾವ ತೀರ್ಮಾನಗಳು ಮಂದಗಾಮಿಗಳು ಮತ್ತು ಉಗ್ರಗಾಮಿಗಳನ್ನು ಕುರಿತಾಗಿ ಸರಿಯಲ್ಲ?

(1) ಮಂದಗಾಮಿಗಳ (ಸೌಮ್ಯವಾದಿ) ಷರತ್ತುಗಳಿಗೆ ವಸಾಹತು ಸರ್ಕಾರವು ವಿಚಲಿತಗೊಳ್ಳಲಿಲ್ಲ.

(2) ಮಂದಗಾಮಿ ನಾಯಕರು ತಮ್ಮ ಅಧಿಕಾರ ಸ್ಥಿತಿಯಲ್ಲಿ ಕಾಂಗ್ರೆಸ್‌ನ ಒಳಗೇ ಮುಂದುವರಿಯುವುದನ್ನು, ಉಗ್ರಗಾಮಿಗಳು ಇಚ್ಛಿಸಿದರು.

(3) ತಮ್ಮ ದೇಶದ ಜನರಿಗಿಂತಲೂ ಹೆಚ್ಚಾಗಿ ಬ್ರಿಟಿಷರಿಗೆ ಹೆಚ್ಚು ಆಪ್ತವಾಗಿದ್ದಾರೆಂಬ ಭಾವ.

(4) ಹಿಂದೂ ಪುನರುದ್ಧಾರತ್ವದಿಂದ ಮುಸ್ಲಿಂರನ್ನು ಉಗ್ರಗಾಮಿಗಳು ಬೇರೆ ಮಾಡಿದ್ದು.

83. ಈ ಕೆಳಗಿನ ಯಾವ ಕಾರಣದಿಂದಾಗಿ ಖಿಲಾಫತ್ ಚಳುವಳಿಯು ತಗ್ಗಿಕೆಯಾಯಿತು ?

(1) ಕಾಂಗ್ರೆಸ್‌ನಿಂದ ಬೆಂಬಲದ ಹಿಂತೆಗೆದುಕೊಳ್ಳುವಿಕೆ.

(2) ಬ್ರಿಟಿಷರಿಂದ ಮುಸ್ಲಿಮರ ವಿರುದ್ಧವಾಗಿ ಪಕ್ಷಪಾತೀಯ ನೀತಿಯ ಪರಿತ್ಯಾಗ.

(3) ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳಲ್ಲಿ ಮುಸ್ಲಿಮರಿಗಾಗಿ ಸ್ಥಾನಗಳನ್ನು 1919 ರ ಕಾಯ್ದೆಯಡಿಯಲ್ಲಿ ಕಾಯ್ದಿರಿಸುವಿಕೆ.

(4) ಟರ್ಕಿಯಲ್ಲಿ ಮುಸ್ತಫಾ ಕಮಾಲ್ ಪಾಷಾರಿಂದ ಅಧಿಕಾರದ ಗ್ರಹಿಕೆ ಮತ್ತು ಖಲೀಫಾತ್‌ನ ಉಚ್ಚಾಟನೆ.

84. ಪಂಚಾಯತ್ ರಾಜ್‌ಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದನ್ನು 73ನೇ ಸಂವಿಧಾನದ ತಿದ್ದುಪಡಿಯಿಂದ ನೀಡಲಾಗಿಲ್ಲ?

(1) ಎಲ್ಲಾ ಹಂತಗಳಲ್ಲೂ ಸ್ತ್ರೀಯರಿಗಾಗಿ ಎಲ್ಲಾ ಚುನಾಯಿತ ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ 1/3 ಭಾಗದಷ್ಟು ಸ್ಥಾನಗಳನ್ನು ಮೀಸಲಾಗಿರಿಸುವುದು.

(2) ಪಂಚಾಯತಿ ರಾಜ್ ಸಂಸ್ಥೆಗಳಿಗಾಗಿ ಸಂಪನ್ಮೂಲಗಳ ಹಂಚಿಕೆಗಾಗಿ ರಾಜ್ಯಗಳು ಹಣಕಾಸು ಆಯೋಗಗಳನ್ನು ರಚಿಸುವುದು.

(3) ಒಂದು ವೇಳೆ ಪಂಚಾಯತ್ ರಾಜ್‌ನ ಸಂಸ್ಥೆಗಳು ಅತಿಕ್ರಮಿಸಲ್ಪಟ್ಟಲ್ಲಿ ಅಥವಾ ವಿಸರ್ಜಿತವಾದಲ್ಲಿ, 6 ತಿಂಗಳೊಳಗಾಗಿ ಚುನಾವಣೆಗಳನ್ನು ನಡೆಸುವುದು.

(4) ಪಂಚಾಯತ್ ರಾಜ್‌ನ ಆಯ್ಕೆಯಾಗಿರುವ ಕಾರ್ಯಕಾರಿಗಳು 2 ಕ್ಕಿಂತಲೂ ಹೆಚ್ಚು ಮಕ್ಕಳನ್ನು ಹೊಂದಿದ್ದಲ್ಲಿ ಅವರು ತಮ್ಮ ಕಛೇರಿಯಲ್ಲಿ ಅಧಿಕಾರ ನಿರ್ವಹಿಸದಂತೆ ಅನರ್ಹರನ್ನಾಗಿಸುವುದು.



www.kpscvaani.com

Scanned by CamScanner

**85.** ಸಹವರ್ತಿಪಟ್ಟಿಯಲ್ಲಿನ ವಿಷಯದ ಕುರಿತಾದ ಕಾನೂನಿನ ಬಗ್ಗೆ ಕೇಂದ್ರ ಮತ್ತು ರಾಜ್ಯಗಳ ನಡುವೆ ಘರ್ಷಣೆ ಉಂಟಾದಾಗ ಈ ಕೆಳಗಿನವುಗಳಲ್ಲಿ ಯಾವುದು ಸರಿ ?

(1) ಮೊದಲು ಜಾರಿಯಾದ ಕಾನೂನಿನ ಪ್ರಾಧಾನ್ಯತೆ

(2) ರಾಜ್ಯ ಪ್ರಾಧಾನ್ಯತೆಯ ಕಾನೂನು.

(3) ಕೇಂದ್ರ ಪ್ರಾಧಾನ್ಯತೆಯ ಕಾನೂನು.

(4) ಎರಡೂ ಕಾನೂನುಗಳ ನಿರರ್ಥಕತೆ.

**86.** ರೂಪಾಂತರಿತ ಶಿಲೆಗಳು ಇವುಗಳಿಂದ ಉಗಮವಾಗುತ್ತವೆ

(1) ಅಗ್ನಿಜನ್ಯ

(2) ಸಂಚಿತ

(3) ಅಗ್ನಿಜನ್ಯ ಮತ್ತು ಸಂಚಿತ ಎರಡೂ

(4) ಮೇಲಿನ ಯಾವುದೂ ಅಲ್ಲ

**87.** ಈ ಕೆಳಗಿನವುಗಳಲ್ಲಿನ ಯಾವ ಲಕ್ಷಣಗಳನ್ನು ಭಾರತೀಯ ಸಂಯುಕ್ತತತ್ವದಲ್ಲಿ ತಪ್ಪಾಗಿ ಪಟ್ಟಿ ಮಾಡಲಾಗಿದೆ ?

(1) ರಾಜ್ಯ ಸಭೆಯಲ್ಲಿ ರಾಜ್ಯಗಳಿಗೆ ಸಮಾನ ಪ್ರಾತಿನಿಧ್ಯವನ್ನು ನೀಡುತ್ತದೆ.

(2) ಇದು ಸ್ವತಂತ್ರ ನ್ಯಾಯಾಂಗ ವ್ಯವಸ್ಥೆಯನ್ನು ಒದಗಿಸುವುದು.

(3) ಇದು ಲಿಖಿತ ಸಂವಿಧಾನವನ್ನು ಹೊಂದಿದೆ.

(4) ಇದು ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರಗಳನ್ನು ವಿಭಾಗಿಸುತ್ತದೆ.

**88.** ಪ್ರಜಾಪ್ರಭುತ್ವ ಪರಿವರ್ತನೆಯ ಸಿದ್ಧಾಂತದ ಪ್ರಕಾರ 2011 ರ ಜನಗಣತಿಯಂತೆ ರಾಜ್ಯಗಳು ಪರಿವರ್ತನೆಯ ನಾಲ್ಕನೇ ಹಂತದಲ್ಲಿವ ಎಂದು ಹೇಳಬಹುದು

(1) ಕೇರಳ, ಮಹಾರಾಷ್ಟ್ರ, ಪಂಜಾಬ್ ಮತ್ತು ಆಂಧ್ರ ಪ್ರದೇಶ್

(2) ಕೇರಳ, ತಮಿಳುನಾಡು, ಕರ್ನಾಟಕ ಮತ್ತು ಆಂಧ್ರ ಪ್ರದೇಶ್

(3) ಕೇರಳ, ಪಂಜಾಬ್, ಪಶ್ಚಿಮ ಬಂಗಾಳ ಮತ್ತು ಒರಿಸ್ಸಾ

(4) ಗುಜರಾತ್, ಒರಿಸ್ಸಾ, ಪಶ್ಚಿಮ ಬಂಗಾಳ ಮತ್ತು ಪಂಜಾಬ್

**89.** ಕೆಳಗಿನವುಗಳಲ್ಲಿ ಯಾವುದನ್ನು ಭಾರತದ ಸರ್ವೋಚ್ಚ ನ್ಯಾಯಾಲಯದ ಅಧಿಕಾರ ಕ್ಷೇತ್ರವ್ಯಾಪ್ತಿಯನ್ನಾಗಿ ತಪ್ಪಾಗಿ ಪಟ್ಟಿಮಾಡಲಾಗಿದೆ ?

(1) ಮೂಲದ ಅಧಿಕಾರಕ್ಷೇತ್ರವ್ಯಾಪ್ತಿ

(2) ಮೇಲ್ಮನವಿ ಅಧಿಕಾರಕ್ಷೇತ್ರವ್ಯಾಪ್ತಿ

(3) ಸಲಹಾ ಅಧಿಕಾರಕ್ಷೇತ್ರವ್ಯಾಪ್ತಿ

(4) ಆಡಳಿತಾತ್ಮಕ ಸಂಘರ್ಷಗಳನ್ನು ಶಾಸನರೀತ್ಯಾ ತೀರ್ಮಾನಿಸುವುದು

**90.** ಕೈಗಾರಿಕಾ ಅನಾರೋಗ್ಯವನ್ನು ಕೆಲವೊಮ್ಮೆ ಮಾಲೀಕರು/ ಪ್ರವರ್ತಕರು ದುರ್ಬಲ ಉದ್ದೇಶಗಳಿಗಾಗಿ ವಿನ್ಯಾಸಗೊಳಿಸುತ್ತಾರೆ ಎಂದು ಆರೋಪಿಸಲಾಗಿದೆ. ಈ ಕೆಳಗಿನವುಗಳಲ್ಲಿ ಯಾವುದು ಅಂತಹ ಕಾಯಿಲೆಗೆ ಆಂತರಿಕ ಅಂಶವಲ್ಲ ?

(1) ತಪ್ಪು ನಿರ್ವಹಣೆ

(2) ನಿಧಿಗಳ ತಿರುವು

(3) ತಾಂತ್ರಿಕ ಅವ್ಯವಸ್ಥೆ

(4) ತಪ್ಪು ಲಾಭಾಂಶ ನೀತಿ



www.kpscvaani.com
Scanned by CamScanner

91. ಆಕೆಯ ಹೆಸರನ್ನು ಮುಘಲರ ಫರ್ಮಾನುಗಳ ಮೇಲೆ ಬರೆಯಲಾಗಿದ್ದು ಮತ್ತು ನಾಣ್ಯಗಳ ಮೇಲೆ ಕೆತ್ತಲಾಗಿದ್ದು, ಆ ಮುಘಲ್ ರಾಣಿಯ ಹೆಸರೇನು ?

(1) ನೂರ್ ಜಹಾನ್

(2) ಮರಿಯಂ ಮಕಾನಿ

(3) ಮಾಹಂ ಅನಗ

(4) ಮುಮ್ತಾಜ್ ಮಹಲ್

92. ತ್ರೈಪಾಕ್ಷಿಕ ಹೋರಾಟದಲ್ಲಿ ದಕ್ಷಿಣದ ಯಾವ ರಾಜಮನೆತನವು ಪ್ರಮುಖ ಪಾತ್ರವನ್ನು ವಹಿಸಿತು ?

(1) ಚೋಳರು

(2) ರಾಷ್ಟ್ರಕೂಟರು

(3) ಯಾದವರು

(4) ಪಲ್ಲವರು

93. ಪಶ್ಚಿಮದ ಜಲಯಾನದಿಂದ ಭಾರತವನ್ನು ತಲುಪಬಹುದೆಂದು ಮೊದಲು ಸಲಹೆಯನ್ನಿತ್ತವರಾರು ?

(1) ಹಿಪ್ಪಾರ್ಚಸ್

(2) ಹಿಪ್ಪೊಕ್ರೇಟ್ಸ್

(3) ಅರಿಸ್ಟಾರ್ಚಸ್

(4) ಎರಾಟೊಸ್ತನೀಸ್

94. ಒಬ್ಬ ಲೋಕಸಭಾ ಅಥವಾ ರಾಜ್ಯ ವಿಧಾನಸಭಾ ಸದಸ್ಯನು, ಪೂರ್ವಾನುಮತಿಯಿಲ್ಲದೆ ಅಧಿವೇಶನಕ್ಕೆ ಎಷ್ಟು ದಿನಗಳು ಗೈರುಹಾಜರಿಯಾದಲ್ಲಿ ಅವರ ಸ್ಥಾನವನ್ನು ತೆರವಾಗಿದೆಯೆಂದು ಘೋಷಿಸಬಹುದು ?

(1) 30 ದಿನಗಳು

(2) 60 ದಿನಗಳು

(3) 90 ದಿನಗಳು

(4) 120 ದಿನಗಳು

95. ಸಸ್ಯಗಳು ಎರಡು ಬಗೆಯ ಸಾಗಾಣಿಕಾ ಅಂಗಾಂಶಗಳಾದ ಕ್ಸೈಲಂ ಮತ್ತು ಫ್ಲೋಯೆಂಗಳನ್ನು ಹೊಂದಿವೆ, ಅವುಗಳಲ್ಲಿ ಫ್ಲೋಯೆಂನ ಕಾರ್ಯವೇನು ?

(1) ಬೇರುಗಳಿಂದ ಎಲೆಗಳಿಗೆ ನೀರು, ಖನಿಜಾಂಶಗಳು ಮತ್ತು ದ್ರಾವಣವನ್ನು ಸಾಗಿಸುವುದು.

(2) ಎಲೆಗಳಿಂದ ಸಸ್ಯದ ಉಳಿದ ಭಾಗಗಳಿಗೆ ಆಹಾರವನ್ನು ಸಾಗಿಸುವುದು.

(3) ನೀರಿನ ಭಾಷ್ಪೀಭವನಕ್ಕೆ ಸಹಾಯ ಮಾಡುವುದು.

(4) ಮಣ್ಣಿನಿಂದ ಪೌಷ್ಟಿಕರವಾದ ನೈಟ್ರೋಜನ್‌ನ್ನು (ಸಾರಜನಕವನ್ನು) ಪಡೆಯುವುದು

96. ಭಾರತವು 9 ಕಡಲತೀರದ ರಾಜ್ಯಗಳನ್ನು ಹೊಂದಿದೆ, ಆದರೆ ಹೆಚ್ಚಾಗಿ ಗುಜರಾತ್ ಕರಾವಳಿಯಲ್ಲಿ ಅರ್ಧಕ್ಕಿಂತಲೂ ಹೆಚ್ಚಿನ ಉಪ್ಪು ತಯಾರಾಗುವುದು. ಇದಕ್ಕೆ ಕಾರಣವೇನು ?

(1) ಗಾಂಧೀಜಿಯವರು ಇಲ್ಲಿಂದಲೇ ಉಪ್ಪಿನ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದು.

(2) ಸಮುದ್ರ ನೀರಿನ ಭಾಷ್ಪೀಭವನದ ಮೂಲಕ ಉಪ್ಪಿನ ತಯಾರಿಕೆಗೆ, ಕಡಿಮೆಮಳೆ ಮತ್ತು ಸಂಬಂಧಿಸಿದ ಆರ್ದ್ರತೆಗಳು ಸೂಕ್ತವಾಗಿರುವುದು

(3) ಉಪ್ಪನ್ನು ರಫ್ತು ಮಾಡಲು ಕಾಂಡ್ಲಾ ಬಂದರು ಸಹಾಯಕಾರಿಯಾಗಿದೆ.

(4) ಗುಜರಾತ್ ಕರಾವಳಿಯ ಬಳಿಯಲ್ಲಿ ಸಮುದ್ರ ನೀರಿನ ಲವಣಾಂಶವು ಅತಿ ಅಧಿಕವಾಗಿದೆ.



www.kpscvaani.com
Scanned by CamScanner

**97.** ಮಹಮದ್ ಘಜ್ನಿಯು ಭಾರತದ ಮೇಲೆ ಹದಿನೇಳು ಬಾರಿ ಧಾಳಿಮಾಡಿದನು. ಈ ಧಾಳಿಗೆ ಮುಖ್ಯ ಕಾರಣವು ಕೆಳಗಿನವುಗಳಲ್ಲಿ ಯಾವುದು ?

(1) ಭಾರತದ ಸಂಪತ್ತನ್ನು ಕೊಳ್ಳೆ ಹೊಡೆಯುವುದು

(2) ಭಾರತದಲ್ಲಿ ಇಸ್ಲಾಂನ ಪ್ರಸಾರ

(3) ಭಾರತದಲ್ಲಿ ಅವನ ಸಾಮ್ರಾಜ್ಯವನ್ನು ಸ್ಥಾಪಿಸುವುದು

(4) ಭಾರತದ ಪ್ರಖ್ಯಾತ ಕರಕುಶಲಗಾರರನ್ನು ಪ್ರಲೋಭನಗೊಳಿಸುವುದು ಮತ್ತು ಆತನ ಆಸ್ಥಾನಕ್ಕೆ ಅವರನ್ನು ಒಯ್ಯುವುದು

**98.** ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

ಪ್ರತಿಪಾದನೆ *(A)* :

ಸಮಭಾಜಕವೃತ್ತದ ಬಳಿಯ ಪ್ರದೇಶಗಳು ವರ್ಷವಿಡೀ ಮಳೆಯನ್ನು ಪಡೆಯುತ್ತವೆ.

ಕಾರಣ *(R)* :

ಅಧಿಕ ಉಷ್ಣಾಂಶಗಳು ಮತ್ತು ಅಧಿಕ ಆರ್ದ್ರತೆಗಳು ಸಮಭಾಜಕ ವೃತ್ತದ ಬಳಿ ಹೆಚ್ಚಿನ ಮಧ್ಯಾಹ್ನಗಳಲ್ಲಿ ಸಾಂಪ್ರದಾಯಿಕ ಮಳೆಗಳುಂಟಾಗಲು ಕಾರಣ ವಾಗುತ್ತದೆ.

ಈ ಕೆಳಗಿನವುಗಳಲ್ಲಿ ಯಾವುವು ಸರಿ ?

(1) (A) ಮತ್ತು (R) ಗಳೆರಡೂ ಸರಿ ಮತ್ತು (R), (A) ಯ ಸರಿಯಾದ ವಿವರಣೆಯಾಗಿದೆ

(2) (A) ಮತ್ತು (R) ಗಳೆರಡೂ ಸರಿ ಆದರೆ (R), (A) ಯ ಸರಿಯಾದ ವಿವರಣೆಯಾಗಿಲ್ಲ

(3) (A) ಸರಿ ಆದರೆ (R) ತಪ್ಪು

(4) (A) ತಪ್ಪು ಆದರೆ (R) ಸರಿ

**99.** (ಪಟ್ಟಿ I) ರಲ್ಲಿನ ದೇಶಗಳನ್ನು ಅವುಗಳು ಖ್ಯಾತಿ ಪಡೆದಿರುವ (ಪಟ್ಟಿ II) ಬ್ರಾಂಡ್‌ನ ಕಾರುಗಳೊಂದಿಗೆ ಹೊಂದಿಸಿ :

| *ಪಟ್ಟಿ I (ದೇಶಗಳು)* | *ಪಟ್ಟಿ II (ಕಾರ್‌ನ ಬ್ರಾಂಡ್)* |
|---|---|
| A. ಜರ್ಮನಿ | I. ಫೋರ್ಡ್ |
| B. ಇಟಲಿ | II. ಫಿಯಟ್ |
| C. ಯುನೈಟೆಡ್ ಕಿಂಗ್‌ಡಂ | III. ಮರ್ಸಿಡಿಸ್ |
| D. ಅಮೆರಿಕಾ ಸಂಯುಕ್ತ ಸಂಸ್ಥಾನ | IV. ರೋಲ್ಸ್ ರಾಯ್ಸ್ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | **A** | **B** | **C** | **D** |
|---|---|---|---|---|
| (1) | III | II | IV | I |
| (2) | III | II | I | IV |
| (3) | IV | III | II | I |
| (4) | IV | III | I | II |

**100.** ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. ಶಿಂಷಾವು ಕಾವೇರಿಯ ಎಡತೋಳುಭಾಗದ ಉಪನದಿಯಾಗಿದೆ.

B. ಕಬಿನಿಯು ಕಾವೇರಿಯ ಬಲತೋಳುಭಾಗದ ಉಪನದಿಯಾಗಿದೆ.

C. ತುಂಗಭದ್ರೆಯು ಕೃಷ್ಣಾನದಿಯ ಬಲತೋಳುಭಾಗದ ಉಪನದಿಯಾಗಿದೆ.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು /ವು ಸರಿ ? ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) A ಮತ್ತು B ಮಾತ್ರ

(3) A ಮತ್ತು C ಮಾತ್ರ

(4) A, B ಮತ್ತು C



www.kpscvaani.com
Scanned by CamScanner